



ವಿಳಾಸ: ನೂಪುರ ಭ್ರಮರಿ,'ಸಾನ್ನಿಧ್ಯ' ಪ್ರಕಾಶನ, ದೇಚೂರು ರಸ್ತೆ, ಅಶ್ವತ್ಥಕಟ್ಟೆ ಸಮೀಪ,
ಮಡಿಕೇರಿ, ಕೊಡಗು- ೫೭೧೨೦೧, ಫೋನ್ ನಂ: 9964140927, 9880592986
ವೆಬ್‌ಸೈಟ್ : www.noopurabhramari.com
ಇ-ಮೈಲ್ ವಿಳಾಸ: feedback@noopurabhramari.com



ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

## ನಿಮಗಿದೋ ಆತ್ಮೀಯ ಆಹ್ವಾನ

**ಆತ್ಮೀಯ.............................**

**ನೂಪುರ ಭ್ರಮರಿಯು ಕಲೆ- ಸಂಸ್ಕೃತಿಗಳ ಪರಿಚಯಕ್ಕೆ, ಪರಸ್ಪರ ಮಿಲನಕ್ಕೆ, ಅದರಲ್ಲಿನ ನಮ್ಮ ಕರ್ತವ್ಯಕ್ಕೆ ಪೂರಕ ವಾತಾವರಣವನ್ನು ಕಲ್ಪಿಸಿಕೊಡುವುದರೊಂದಿಗೆ ನಮ್ಮನ್ನು ನಾವು ಅರಿಯುವ ಪ್ರಯತ್ನದಲ್ಲಿ ಹೆಜ್ಜೆಯಿಡುತ್ತಿರುವುದು ನಿಮಗೆಲ್ಲರಿಗೂ ತಿಳಿದ ಅಂಶ. ಈ ನಿಟ್ಟಿನಲ್ಲಿ ಮತ್ತಷ್ಟು ಸದಭಿರುಚಿಯ ಪ್ರಯತ್ನಗಳಿಗೆ ನಿಮ್ಮ ಸಹಕಾರ ಬೇಕು. ಈಗಾಗಲೇ ಮಿತಿ-ಭೇಧಗಳನ್ನು ದಾಟಿ ಮುನುಗ್ಗುತ್ತಿರುವ ಲಾಭದ ಉದ್ದೇಶವಿಲ್ಲದ ಪತ್ರಿಕೆಗೆ ಗಡಿ, ಭಾಷೆಯ ಎಲ್ಲೆಗಳನ್ನು ದಾಟಿ ಕಲೆಯ ಹರಿವನ್ನು ಹರಡಿಸುವ ಆಸಕ್ತಿಗೆ ಮತ್ತಷ್ಟು ಇಂಬು ನೀಡುವಂತಾಗಬೇಕು. ಆದ್ದರಿಂದ ಪತ್ರಿಕೆಯು ನಿಮ್ಮನ್ನು ತನ್ನ ಬಳಗದವರನ್ನಾಗಿ ಮಾಡಿಕೊಳ್ಳಲು ಸಂತೋಷಪಡುತ್ತದೆ. ತನ್ನ ಕುಟುಂಬಕ್ಕೆ ನಿಮ್ಮನ್ನು ಆತ್ಮೀಯವಾಗಿ ಆಮಂತ್ರಿಸುತ್ತಿದೆ. ಪತ್ರಿಕೆಯ ಸಂಪಾದಕೀಯ ಸಲಹೆಗಾರರಾಗಿ, ಸಕ್ರಿಯ ಸದಸ್ಯರಾಗಿ ತಾವು ನೂಪುರ ಭ್ರಮರಿಯ ಜೊತೆಗಿರುತ್ತೀರಿ, ನಿರಂತರ ಸಂಪರ್ಕದಲ್ಲಿರುತ್ತೀರಿ ಎಂಬುದು ನಮ್ಮ ಭಾವನೆ.**

## ನೀವೇನು ಮಾಡಬಹುದು?

- ನಿಮ್ಮ ಸದಸ್ಯತ್ವನ್ನು ಪತ್ರದ ಮೂಲಕವೋ, ಅಥವಾ ಇ-ಮೈಲ್ ಮೂಲಕವೋ ಅಥವಾ ಫೋನ್ ಮುಖಾಂತರವೋ ದೃಢಪಡಿಸಿ. ತಮ್ಮ ಸಂಪರ್ಕ ವಿಳಾಸ, ನಂಬರ್‌ನ್ನು ನೀಡಿದರೆ ಮುಂದಿನ ದಿನಗಳಲ್ಲಿ ಲೇಖನ, ಮಾಹಿತಿ, ಕಾರ್ಯಕ್ರಮಕ್ಕೆ ಮತ್ತು ಅವುಗಳ ಬಗೆಗಿನ ಪರಿಶೀಲನೆಗೆ ಸಹಕಾರಿಯಾಗುತ್ತದೆ. *ಸದಸ್ಯತ್ವಕ್ಕೆ ಯಾವುದೇ ಚಂದಾ ಅಥವಾ ಫೀಸುಗಳಿಲ್ಲ.*
- ನಿಮ್ಮ ಸಂಸ್ಥೆಯ, ಗುರು-ಕಲಾವಿದ, ಸಾಧನೆಗಳ ಕುರಿತಾದ ಪರಿಚಯ ಅಥವಾ ಲೇಖನವನ್ನೋ ಬರೆದು ಕಳಿಸಿ. ಇದು ಮುಂದಿನ ಸಂಚಿಕೆಗಳಲ್ಲಿ ಬರಲಿರುವ ಪ್ರದೇಶವಾರು/ಶಾಖಾವಾರು ನೂತನ 'ಪರಿಚಯ-ಪರಿಭ್ರಮಣ' ಅಂಕಣಕ್ಕೆ





ಬಳಸಿಕೊಂಡು ನಮ್ಮ ನಡುವೆ ಪರಿಚಯದ ಸೇತುವೆಯನ್ನು ಕಲ್ಪಿಸಿಕೊಳ್ಳಬಹುದು. ಇದರಿಂದ ಶಾಸ್ತ್ರೀಯ/ಜನಪದ/ಯಕ್ಷಗಾನ/ನಾಟಕ ..ಹೀಗೆ ವಿವಿಧ ಪ್ರದರ್ಶಕ ಕಲೆಗಳ ಕಲಾಸಕ್ತ, ನೃತ್ಯಾಸಕ್ತ ಅಭ್ಯರ್ಥಿಗಳಿಗೆ, ಕಲಾರಾಧಕರಿಗೆ ಅನುಕೂಲವಾಗುತ್ತದೆ.

ಅಥವಾ

ನೀವು ನಿಮ್ಮ ಊರಿನ/ಪ್ರದೇಶದ/ಪಟ್ಟಣದ ಗುರು-ಕಲಾವಿದ-ಸಂಸ್ಥೆಗಳ ಕುರಿತು ಪುಟ್ಟ ಮಾಹಿತಿ ಮತ್ತು ಸಂಪರ್ಕ ವಿಳಾಸ, ಅಥವಾ ಆಯಾಯ ಊರಿನ ಕಲಾ ಪ್ರಗತಿ, ಅಲ್ಲಿನ ಸಾಧನೆಗಳ ಕುರಿತು ಲೇಖನವನ್ನು ಕಳಿಸಬಹುದು,

ಮಲೆನಾಡು ಶಾಖೆ ( ಕೊಡಗು/ಚಿಕ್ಕಮಗಳೂರು/ ಹಾಸನ)

ಬೆಂಗಳೂರು ಶಾಖೆ

ದಕ್ಷಿಣ ಕನ್ನಡ( ಉಡುಪಿ/ ಪುತ್ತೂರು-ಸುಳ್ಯ/ಕಾಸರಗೋಡು/ಮಂಗಳೂರು) ಶಾಖೆ

ಉತ್ತರ ಕನ್ನಡ (ಶಿವಮೊಗ್ಗ/ ಸಾಗರ ಇತ್ಯಾದಿ)ಶಾಖೆ

ಉತ್ತರ ಕರ್ನಾಟಕ ಶಾಖೆ

ಮುಂಬೈ ಶಾಖೆ

ಚೆನ್ನೈ ಶಾಖೆ

ದೆಹಲಿ ಶಾಖೆ... ಹೀಗೆ, ವಿವಿಧ ಶಾಖೆಗಳಲ್ಲಿ ನೀವು ಇರುವಿರಾದರೆ ಅಲ್ಲಿನ ಸಕ್ರಿಯ ಸದಸ್ಯರಾಗಿ ಮಾಹಿತಿಗಳನ್ನು ನೀಡಬಹುದು. ಈಗಾಗಲೇ ಈ ಸಂಚಿಕೆಯಲ್ಲಿ ಪ್ರಾರಂಭಗೊಂಡಿರುವ 'ದೀವಟಿಗೆ' ವಿಭಾಗಕ್ಕೆ ಅದನ್ನು ಬಳಸಿಕೊಳ್ಳಲಾಗುತ್ತದೆ.

- ಕಲೆಯಲ್ಲಿ ತರಬೇತಿ ಹೊಂದುತ್ತಿರುವ/ಹೊಂದಿರುವ ವಿದ್ಯಾರ್ಥಿಗಳಾದರೆ ಕಲಿಯುವ ದಿಸೆಯಲ್ಲಿ ತಾವು ಎದುರಿಸುವ ಸವಾಲು, ಕಷ್ಟ-ಇಷ್ಟಗಳ ಕುರಿತು ಅನುಭವಗಳನ್ನು ಬರೆದು ಕಳಿಸಬಹುದು. ಪೋಷಕರಾದರೆ ತಮ್ಮ ಕನಸು, ತಮ್ಮ ಮಕ್ಕಳನ್ನು ಕಲಾವಿದರನ್ನಾಗಿ ಮಾಡುವಲ್ಲಿ ಅವರ ಪ್ರಯತ್ನ, ಸವಾಲು ಮುಂತಾದ ವಿಷಯಗಳ ಕುರಿತೂ ಅನುಭವ ಲೇಖನವನ್ನು ಕಳಿಸಬಹುದು. ಇದು ಪ್ರತಿಯೊಬ್ಬ ಕಲಾಸಕ್ತರ ಪತ್ರಿಕೆಯಾಗಿರುವುದರಿಂದ ಇತಿ-ಮಿತಿ-ಬೇಧಗಳಿಗೆ ಇಲ್ಲಿ ಅವಕಾಶವಿಲ್ಲ. ಕಲೆಯನ್ನು ಪ್ರತಿಯೊಬ್ಬ ಆಸಕ್ತರಿಗೂ ಆತ್ಮೀಯವಾಗಿಸಿ ಅವರನ್ನು ಮತ್ತಷ್ಟು ಹತ್ತಿರಕ್ಕೆ ತರುವಂತೆ ಮಾಡುವುದು ನಮ್ಮ ಆಶಯ.
- ಯಾವುದೇ ಶಾಸ್ತ್ರೀಯ/ಜನಪದ/ನೂತನ/ಯಕ್ಷಗಾನ/ನಾಟಕ/ನೃತ್ಯ ಹೀಗೆ..,

ವಿವಿಧ ಪ್ರದರ್ಶಕ ಕಲೆಗಳ ಕುರಿತಂತೆ ಪರಿಚಯ ನೀಡುವ ನಿಟ್ಟಿನ ಅಥವಾ ವಿಮರ್ಶಾತ್ಮಕವಾದ–ವಿವೇಚನೆಗೆ ಹಚ್ಚಬಲ್ಲಂಥಹ ಲೇಖನ, ಬರಹ, ಕವನ, ಚಿಂತನೆಯನ್ನು ಕಳಿಸಬಹುದು.

ಪ್ರದರ್ಶಕ ಕಲೆಗಳಲ್ಲೂ ಗುರುತರವಾದ ಸಾಧನೆ ಮಾಡಿದ, ನಿಃಸ್ವಾರ್ಥ ರೀತಿಯಲ್ಲಿ ಕಲಾಸೇವೆಯನ್ನು ಮುಂದುವರೆಸುವ, ಕೊಡುಗೆ ನೀಡುವ ವ್ಯಕ್ತಿಗಳನ್ನು ತಾವು ದರ್ಶಿಸಿ–ಸಂದರ್ಶಿಸಿ, ಅವರ ಅನುಭವ–ವಿಚಾರಗಳನ್ನು ಸಂದರ್ಶನ ಲೇಖನವಾಗಿ ಬರೆದು ಕಳಿಸಬಹುದು.

- ಯಾವುದೇ ಪ್ರದೇಶದಲ್ಲಿ ನಡೆದ ಯಾವುದೇ ಸಂಸ್ಥೆಯ ವಿಶಿಷ್ಟವೆನಿಸುವ ರಂಗಪ್ರಯೋಗ, ಕಾರ್ಯಗಾರ, ಪ್ರದರ್ಶನದ ಬಗೆಗೆ ಮಾಹಿತಿ, ವಿಮರ್ಶೆ, ಸಂದರ್ಶನ, ಲೇಖನಕ್ಕೂ ಆದ್ಯತೆಯಿದೆ. ಆದರೆ ಈ ನಿಟ್ಟಿನಲ್ಲಿ ಮಾಮೂಲಿಯೆನಿಸುವ ವಾರ್ಷಿಕೋತ್ಸವ, ಪ್ರವಾಸ, ರಂಗಪ್ರವೇಶದ ವಿವರಗಳಿದ್ದರೆ ಅವು ಬೇಡ.
- ಮುಂದಿನ ದಿನಗಳಲ್ಲಿ ಪತ್ರಿಕೆಯ ಸ್ವರೂಪ–ಸಾಧ್ಯತೆಗಳ ವಿಸ್ತರಣೆಯ ದೃಷ್ಟಿಯಿಂದ ಮತ್ತು ಗುರು–ಕಲಾವಿದ–ಪೋಷಕ–ವಿದ್ಯಾರ್ಥಿ ಮತ್ತು ಪ್ರೇಕ್ಷಕರ ಮೌಲಿಕ, ಗುಣಾತ್ಮಕ ಪರಿಚಯ ಮತ್ತು ಒಟ್ಟುಗೂಡಿಸುವಿಕೆಯ ಹಿನ್ನಲೆಯಲ್ಲಿ ಅನೇಕ ಪ್ರದೇಶವಾರು ಸದಭಿರುಚಿಯ ಕಾರ್ಯಕ್ರಮ–ಸ್ಪರ್ಧೆ–ಪ್ರಶಸ್ತಿ–ಕಾರ್ಯಾಗಾರಗಳನ್ನು ಏರ್ಪಡಿಸುವ ಆಲೋಚನೆಗಳಿವೆ. ಈ ಹಿನ್ನಲೆಯಲ್ಲಿ ಸಂಪರ್ಕ ಸಾಧಿಸುವಿಕೆಗೆ, ಪ್ರಾಯೋಜಕತ್ವಕ್ಕೆ ತಮ್ಮ ಸಲಹೆ–ಸಹಕಾರ ಅಗತ್ಯವಿದೆ.

**ನೂಪುರ ಭ್ರಮರಿ ನಮ್ಮ, ನಿಮ್ಮ, ನಮ್ಮೆಲ್ಲರ ಪತ್ರಿಕೆ.**
**ನರ್ತನ ಜಗತ್ತಿನಲ್ಲೊಂದು ಪರಿಭ್ರಮಣಕ್ಕೆ ನಾವೆಲ್ಲರೂ ಒಟ್ಟಾಗಿ ಮುಂದಾಗೋಣವೇ?**





## ಮಂಜೀರ

‘ಭಾರತೀಯ ಲಲಿತ ಕಲೆಗಳಿಗೆ ಬೇಕಿರುವುದು ಸಾಂಪ್ರದಾಯಿಕ ಗುರುಪರಂಪರೆಯ ಆಶ್ರಯವೋ? ಅಥವಾ ಬದಲಾದ ಕಾಲಘಟ್ಟದ ಶೈಕ್ಷಣಿಕ ಮಾನ್ಯತೆಯೋ?’

...ಈ ಚರ್ಚೆ ರೂಪ ಪಡೆದುಕೊಂಡಿದ್ದು ಇತ್ತೀಚಿನ ದಶಕಗಳಲ್ಲಿ. ಯಾಕೆಂದರೆ, ಗುರುಪರಂಪರೆ ಮತ್ತು ಡಿಗ್ರಿಯ ಮಾನ್ಯತೆ ನೀಡಿದ ಅಕಾಡೆಮಿಕ್ ವಲಯಗಳು ಏಕಕಾಲಕ್ಕೇ ಒಂದಷ್ಟು ಹೊಂದಾಣಿಕೆ, ಅಂತರಗಳನ್ನಿಟ್ಟುಕೊಂಡು ಮುಂದುವರೆಯುತ್ತಿದ್ದರೂ, ಎದುರಿಸುತ್ತಿರುವ ವೈರುಧ್ಯಗಳು ಹೊಸತೇನೂ ಅಲ್ಲ.

ಮೊದಲಿನಿಂದಲೂ ತಮ್ಮ ಗುರುಪರಂಪರೆಗೆ ಬದ್ಧವಾಗಿ ಬೆಳೆದ ಲಲಿತಕಲೆಗಳು ಕಾಲಾಂತರದಲ್ಲಿ ಬ್ರಿಟೀಷರ ಆಗಮನದಿಂದ ಅಕಾಡೆಮಿಕ್ ವಲಯದಲ್ಲೂ ಸ್ಥಾನ ಪಡೆದುಕೊಂಡು ಹೊಸ ಆಯಾಮಕ್ಕೆ ತೆರೆದುಕೊಂಡಿತು. ಈ ಎರಡೂ ವಲಯಗಳೂ ತಮ್ಮದೇ ಆದ ನಿಟ್ಟಿನಲ್ಲಿ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಧೋರಣೆಗಳನ್ನು ಒಳಗೊಂಡವು. ಗುರುಪರಂಪರೆ ಕಲೆಯ ಶಾಸ್ತ್ರೀಯ ಅಧ್ಯಯನಕ್ಕೆ, ಸಾಂಪ್ರದಾಯಿಕತೆಗೆ, ಶಿಸ್ತಿಗೆ ಒತ್ತು ನೀಡಿ ಗುರು–ಶಿಷ್ಯ ಸಂಬಂಧಕ್ಕೆ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಸೌಹಾರ್ದ ಮುನ್ನುಡಿ ಬರೆಯುತ್ತದೆ, ಕಲೆಯ ಬಾಳ್ವೆಯನ್ನು ದೀರ್ಘ ಮಾಡುತ್ತದೆ ಎಂಬ ಒಲವು ಕೇಳಿ ಬಂದರೆ; ಗುರು ಪರಂಪರೆಯ ಲೋಪಗಳನ್ನು ಎತ್ತಿ ಹಿಡಿದ ಅಕಾಡೆಮಿಕ್ ವಲಯ ಎಲ್ಲಾ ಮತ–ಧರ್ಮೀಯರನ್ನು ಸಮಾನವಾಗಿ ಕಾಣುವ–ದುಡಿಸಿಕೊಳ್ಳುವ ಮುಕ್ತ ಅವಕಾಶ, ಕಲೆಗೆ ಶೈಕ್ಷಣಿಕ ಸಂವಿಧಾನವನ್ನಿತ್ತು ನೋಡುವ ಕ್ರಮದತ್ತ ಮುಖ ಮಾಡಿತ್ತು.

ಕಲೆಯನ್ನೇ ಉಸಿರಾಗಿಸಿಕೊಂಡವರಿಗೆ ಡಿಗ್ರಿಯ ಅವಶ್ಯಕತೆ ಇರುವುದಿಲ್ಲ. ನಿಜ, ಆದರೆ ಈ ಕಾಲದಲ್ಲಿ ಡಿಗ್ರಿ–ಸರ್ಟಿಫಿಕೇಟುಗಳ ಶೈಕ್ಷಣಿಕ ಮಾನ್ಯತೆಯೇ ಮಾನದಂಡವಾಗುವಾಗ ಅರ್ಹರಿಗೆ ಅದಿಲ್ಲದೇ ಹೊದಲ್ಲಿ ಆ ಕೊರಗು ಉಳಿಯುತ್ತದೆ. ಇಂತಹ ಸಂದರ್ಭದಲ್ಲಿ ಗುರುಪರಂಪರೆಯನ್ನೂ ಶ್ರದ್ಧೆಯಿಂದ ಮುಂದುವರೆಸುವವರು ಸೂಕ್ತ ಪರಿಹಾರ ನೀಡಿದ ಉದಾಹರಣೆಗಳು ಇದೆ.

ಆದರೆ ಬರಬರುತ್ತಾ ಕಲೆಗಳ ಕಲಿಕಾ ಪರಂಪರೆ ಕೇವಲ ವಾರದ ಎರಡು ದಿನಗಳಿಗಷ್ಟೇ ಸೀಮಿತವಾಗುತ್ತಾ, ಹವ್ಯಾಸವಾಗುತ್ತಾ ಕೊನೆಗೆ ಪ್ರಾಥಮಿಕ, ಮಾಧ್ಯಮಿಕ, ವಿದ್ವತ್ ಪರೀಕ್ಷೆಗಳ ಬೆನ್ನು ಹತ್ತಿ ಅಂಕ ಗಿಟ್ಟಿಸಿ ಬೀಗುವ (ಕಲೆಯನ್ನು, ಅದರ ಒಳನೋಟ, ಸಾಧ್ಯತೆಗಳನ್ನು ಅರಿಯುವಲ್ಲಿ ಸೋತರೂ) ಮನೋಸ್ಥಿತಿಯನ್ನು ಬಿತ್ತಿತು. ಬಹುಶಃ ಪರಂಪರೆಯ ಪ್ರತಿನಿಧಿಗಳು ಅಕಾಡೆಮಿಕ್‌ನೊಂದಿಗೆ ತಮ್ಮನ್ನು ಬಲವಂತವಾಗಿ ಗುರುತಿಸಿಕೊಳ್ಳಲು ಹೋದದ್ದೇ ಕಾರಣವಾಯಿತೇನೋ!

ಮಾತ್ರವಲ್ಲ, ಸಲಾಮು ಹೊಡೆಯುವ ಪ್ರವೃತ್ತಿ, ತಮ್ಮ ಲಾಭಕ್ಕೆ ಕೆಲಸ ಮಾಡಿಕೊಳ್ಳುವ ಗುರು ವೃತ್ತಿ, ಗೊತ್ತು ಗುರಿಯಿಲ್ಲದ ಆಧುನಿಕ ಪ್ರಯೋಗಗಳು, 'ಹೆಸರು' ಬರಬೇಕೆಂಬ ನಿಟ್ಟಿನಲ್ಲಿ ರಂಗಪ್ರವೇಶ–ಪ್ರದರ್ಶನಗಳಲ್ಲಾದ ಅನಪೇಕ್ಷಿತ ಮನೋಭಾವಗಳೇ, 'ನೃತ್ಯ ಕಲೆಗಳಂತಹ ಪ್ರದರ್ಶಕ ಕಲೆಗಳು ದುಬಾರಿ' ಎನ್ನುವ ಭಾವನೆಯನ್ನು ಜಾಗೃತ ಮಾಡಿತ್ತು. ಪರಂಪರೆಗೆ ಹೊಸ ಸ್ಪರ್ಶವನ್ನು ನೀಡುವ ಭರದಲ್ಲಿ, ಹಳತು ಕೊಳೆಯನ್ನು ತೊಳೆಯುವ ಉದ್ದೇಶದಲ್ಲಿ ಹೊರಟಾಗ ಮೂಲರೂಪಕ್ಕೆ ಹೊಡೆತ ಬಿದ್ದದ್ದೇ, ಕಲೆ ಮತ್ತಷ್ಟು 'ಕಮರ್ಷಿಯಲ್' ಆಗಲು ಕೊಡುಗೆ ನೀಡಿರಬಹುದು!

ಹಾಗಂತ ಪೂರ್ಣ ನಿರಾಕರಣೆಯೂ ಸಲ್ಲದು. ಇಂದಿನ ಯುಗಕ್ಕೆ ತಕ್ಕ ಮಟ್ಟಿನ 'ಕಮರ್ಷಿಯಾಲಿಟಿ' ಕಲೆಯ ಶಿಸ್ತಿಗೆ, ಪ್ರತಿಷ್ಠೆಗೆ ಸ್ವಾಗತಾರ್ಹ ಕೂಡಾ!

ಕಲೆ ನಿಂತ ನೀರಾದರೆ ಎಷ್ಟು ಚೆನ್ನ? ಬದಲಾದ ಕಾಲಕ್ಕೆ ಕಲೆಗೂ ಶೈಕ್ಷಣಿಕ ಮಾನ್ಯತೆ ಬೇಡವೇ?– ಆದ್ದರಿಂದ ಕಳೆದ ಕೆಲವು ದಶಕಗಳಿಂದ ಅಭಿವ್ಯಕ್ತಿಯಲ್ಲಿ ಹೊಸತನ್ನು , ಪ್ರಯೋಗಶೀಲತೆಯನ್ನು ತರುವಲ್ಲಿ ಲಲಿತಕಲಾ ಮಹಾವಿದ್ಯಾಲಯಗಳಂತಹ ಅಕಾಡೆಮಿಕ್ ಸಂಸ್ಥೆಗಳು ಸಾಕಷ್ಟು ಶ್ರಮಿಸುತ್ತಿವೆ. ವಿವಿಧ ಕಲಾಪ್ರಕಾರಗಳ ಬಗೆಗೆ, ಅವುಗಳ ಇತಿಹಾಸದ ಕುರಿತು ಅರಿವು ಬೆಳೆಸಿಕೊಳ್ಳಲು ಅಪಾರ ಅವಕಾಶಗಳಿರುತ್ತದೆ. ಕಲೆಯ ಪದವಿ ಮತ್ತು ಉನ್ನತ ವ್ಯಾಸಂಗ ನಮ್ಮಲ್ಲಿನ ಆಸಕ್ತಿಗೆ ಮತ್ತಷ್ಟು ಗಾಂಭೀರ್ಯ, ಶಿಸ್ತು, ಕ್ರಮಬದ್ಧತೆಯನ್ನು ಕೊಡುತ್ತದೆ. ಇದರಿಂದ, ಆಗತಾನೇ ಹೊಸತಾಗಿ ಕಲಾಪ್ರಕಾರವನ್ನು ಕಲಿಯುವವರಷ್ಟೇ ಅಲ್ಲದೆ, ಹುಟ್ಟು ಕಲಾವಿದರೂ ಮತ್ತಷ್ಟು ಪಳಗಿ ಸಮರ್ಥ ಕಲಾವಿದರಾದವರಿದ್ದಾರೆ.

ಹಲವು ಸರ್ಕಾರಿ ಮತ್ತು ಖಾಸಗಿ ಪ್ರಾಯೋಜಿತ ಲಲಿತ ಕಲಾ ಮಹಾವಿದ್ಯಾಲಯಗಳು ಕಲಾ ಪ್ರಪಂಚದ ಸಮನ್ವಯ ಅಧ್ಯಯನ ನೀಡುವಲ್ಲಿ, ಸಮಗ್ರವಾಗಿ ಅದನ್ನು ದುಡಿಸಿಕೊಳ್ಳುವಲ್ಲಿ ತೊಡಗಿಸಿಕೊಂಡಿವೆ. ಹಾಗೆ ನೋಡಿದರೆ, ಉದ್ಯೋಗವನ್ನೇ ಗುರಿಯಾಗಿಸಿಕೊಂಡ ಎಂದಿನ ಕಾಲೇಜು ಥಿಯರಿಗಳೆಡೆಗೆ ಮುಖ ಮಾಡಬೇಕಾದ ಅನಿವಾರ್ಯತೆ ಇಲ್ಲಿಲ್ಲ. ಕಾಟಾಚಾರಕ್ಕೆ ನೃತ್ಯ ತರಗತಿಗಳಿಗೆ ಸೇರಿಕೊಳ್ಳುವ, ಕಲಿಯುವ, ಕಲಿತು ಬಿಡುವ ಪರಿಪಾಠ ಇಲ್ಲಿಲ್ಲ. ಕಲೆಯನ್ನು ಪಠ್ಯ ವಸ್ತುವಾಗಿ ಅಧ್ಯಯನ ಮಾಡುವುದೇ ವಿಶಿಷ್ಟ ಬಗೆಯ ಮನೋಲ್ಲಾಸ. ಒಂದು ನಿಟ್ಟಿನಲ್ಲಿ ಇದೊಂದು ರೀತಿಯ ಸಾಂಸ್ಕೃತಿಕ ಬಂಡಾಯ!

ಇದಕ್ಕೆ ಅಪವಾದವೆನಿಸುವ ಪ್ರಸಂಗಗಳೂ ಗುರುಕುಲ, ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಇಲ್ಲದಿಲ್ಲ. ಆದ್ದರಿಂದ ಗುರು ಅಥವಾ ಸಂಸ್ಥೆಗಳ ಆಯ್ಕೆಯಲ್ಲಿ ಎಚ್ಚರಿಕೆ ಇರುವುದು ಒಳಿತು.

ಆಗ, ಕಲೆಯಲ್ಲಿ ನಮ್ಮನ್ನು ವೈವಿಧ್ಯವಾಗಿ ತೆರೆದುಕೊಳ್ಳುವ, ಗುರುತಿಸಿಕೊಳ್ಳುವ, ಸ್ವತಂತ್ರ–ಸಂತೃಪ್ತಿಯ ಜೀವನ ನಡೆಸುವ ಹಂಬಲ ನಿರಂತರ.

**ಪ್ರೀತಿಯಿಂದ,**

**manorama@noopurabhramari.com**

**✍ಸಂಪಾದಕರು**



ನೂಪುರ ಭ್ರಮರಿ

## ಅಂಗಳದ ಮಾತು ತಿಂಗಳ ಚರ್ಚೆ

**ಸಂ**ಪಾದಕೀಯದಲ್ಲಿ ಪ್ರಸ್ತುತಪಡಿಸಿದ ನೃತ್ಯಾಭ್ಯಾಸ ಕಲೆಯ ಕಲಿಕಾಭ್ಯರ್ಥಿಗಳ ಹಾಗೂ ಪಾಲಕರ ಮನೋಸ್ಥಿತಿಯ ವಾಸ್ತವಿಕತೆಯ ಬಗ್ಗೆ ವ್ಯಕ್ತಪಡಿಸಿದ ಮುಕ್ತಕಗಳು ಇಂದಿನ ನವಕಲಾವಿದರ ನಿಜರೂಪವೇ ಆಗಿರುವುದು ಕಲೆಯ ಬೆಳವಣಿಗೆಯ ದೃಷ್ಟಿಯಿಂದ ಖೇದಕರವೇ ಹೌದು. ಸದಾಚಾರಕ್ಕೆ ನಿಧಾನದಲ್ಲಾದರೂ ಪ್ರಾಧಾನ್ಯತೆ ದೊರೆಯಬಹುದೆಂಬ ಆಶಾವಾದದ ದೃಢ ನಿಶ್ಚಯ ಮನೋಭಾವವೇ ಪರಿಹಾರವಾಗಬಲ್ಲುದು ಎನ್ನಬಹುದಷ್ಟೇ !

**–ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, ಕಾಸರಗೋಡು.**

✲✲

**ಖಂ**ಡಿತಕ್ಕೂ ಕಲೆಗಳು ಮಾರಾಟದ ವಸ್ತುಗಳಾಗುತ್ತಿವೆ; ಪ್ರತಿಷ್ಠೆಯ ಪಣವಾಗುತ್ತಿವೆ. ಕೂಸು ಬಡವಾಯಿತು ಎನ್ನುವಂತೆ ಕಲಾರಾಧಕ ಪೋಷಕರು, ಕಲಾರಾಧಕರು, ವಿದ್ಯಾರ್ಥಿಗಳು ಬಸವಳಿಯುವಂತಾಗುತ್ತಿದೆ. ಸಂಪಾದಕೀಯದಲ್ಲಿ ಬಿಚ್ಚಿಟ್ಟ ನೇರ ಅನಿಸಿಕೆ, ಅದರೊಂದಿಗಿನ ಎದೆಗಾರಿಕೆಗೆ 'ಭಲೇ' ಎನ್ನಲೇಬೇಕು! ಅರಿಯುವವರಿಗೆ ಈ 'ಲೇಖನದ ಪ್ರಹಾರ' ಖಂಡಿತಕ್ಕೂ ಸಾಕು. 'ಎಮ್ಮೆ ಚರ್ಮ'ದವರಾದರೆ ಇನ್ನೂ ಎಚ್ಚರಗೊಳ್ಳಲಾರರು ಅಥವಾ 'ನಮ್ಮೆದುರಿಗೆ ಸಾಟಿ ಯಾರು'? ಎನ್ನುವ ದಾರ್ಷ್ಟ್ಯತೆಯೇನೋ ಇದ್ದೀತು! ಅಲ್ಲವೇ?

**–ಗೀತಾ ಕೊಂಕೋಡಿ, ಬರಹಗಾರರು, ಮಂಗಳೂರು.**

✲✲

**ನೀ**ವು ಕಲಿತ, ಅಭ್ಯಸಿಸಿದ ನೃತ್ಯ ಪ್ರಕಾರಗಳು, ವಿಷಯ, ಶೈಲಿಗಳು ಶಾಸ್ತ್ರೀಯವಾದುದು., ಮೌಲಿಕವಾದುದು. ಇಂದಿನವರಿಗೆ ಅಂಥದ್ದು ಬೇಡ. ಇಂದು ಕಲಿತು ನಾಳೆ ಪ್ರದರ್ಶಿಸಿ, ನಾಡಿದ್ದು ಅದನ್ನು ವೃತ್ತ ಪತ್ರಿಕೆಯಲ್ಲಿ ಬರುವಂತೆ ಮಾಡಿ– ನೋಡಿ; ಬರೀ ನಾಡಮಟ್ಟವಲ್ಲ! ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ತಮ್ಮದಾಗಬೇಕೆಂಬ ಅಭಿಪ್ರಾಯ. ಇವೆಲ್ಲ ಶ್ರಮದಿಂದ ಸಾಧ್ಯ ಎಂಬುದನ್ನರಿಯರು. ಅವರದ್ದು ಹೆಚ್ಚಿನ ಶ್ರಮ ಹಾಕುವ ಪ್ರವೃತ್ತಿಯಲ್ಲ! ಅವರದ್ದು ನವ್ಯ ನವ್ಯ ನವ್ಯ!

**–ಮೋಹನ .ಗ. ಹೆಗಡೆ, ಸಾಗರ.**



ನರ್ತನ ಸುರಭಿ

# ಚೂರ್ಣಿಕೆ ಮತ್ತು ವಚನ

**—ವೈಷ್ಣವಿ .ಎನ್**

**ಭ**ಗವಂತನ ಚರಿತೆ-ರೂಪ-ಗುಣ-ವರ್ಣನೆಗಳಿಂದ ಕೂಡಿದ ಚೂರ್ಣಿಕೆಗಳು ವೈದಿಕ ಕುಲ- ಸಂಪ್ರದಾಯಕ್ಕನುಗುಣವಾಗಿ ಹುಟ್ಟಿಕೊಂಡವು. ಹೆಚ್ಚಾಗಿ ಸಂಸ್ಕೃತದಲ್ಲಿರುವ ಇವು, ಸುಸಂಸ್ಕೃತ ರಸಿಕ ವರ್ಗಕ್ಕೆ ತೃಪ್ತಿಯನ್ನು ತರುವಂಥವು.

ಹಿಂದೆ ರಾಜರನ್ನು-ಅವರ ಮಹತ್ಕಾರ್ಯಗಳನ್ನು, ದೇವರ ಲೀಲೆಯನ್ನು ಹೊಗಳಲು ವಂಧಿಮಾಗದರಿಂದ ರಚನೆಗೊಂಡ ನಾಮಸ್ಮರಣೆ-ಸಂಕೀರ್ತನೆಗಳೇ ಚೂರ್ಣಿಕೆಯೆನ್ನಲಾಗುತ್ತಿದೆ. ಇವು ಶ್ಲೋಕದಂತಿರದೆ, ರಾಗಬದ್ಧವಾಗಿರುತ್ತವೆ. ಜೊತೆಗೆ, ಪುನರಾವರ್ತಿಸದೆ ಉದ್ದಕ್ಕೆ ಹಾಡುವುದು ಇದರ ವಿಶೇಷ. ಶ್ಲೋಕಗಳಲ್ಲಿ ಪುನರಾವರ್ತನೆಯೇ ವಿಶೇಷವಾಗಿದ್ದು, ರಾಗದ ಪ್ರಭಾವೀ ನಿರೂಪಣೇ ಎದ್ದು ಕಾಣುತ್ತದೆ. ಹಾಗಾಗಿ ಶ್ಲೋಕ ಚೂರ್ಣಿಕೆಗಳು ಒಂದೇ ಎಂದು ಕಂಡರೂ ಸಾಕಷ್ಟು ಭಿನ್ನತೆಗಳಿವೆ. ಮೊದಲು ಕೆಲವು ದೇವಸ್ಥಾನಗಳಲ್ಲಿ ಬಂಡಾರ, ಜಾತ್ರೆ ನಡೆಯುವಲ್ಲಿಗೆ ಹೋಗುವುದಕ್ಕೆ ಪ್ರಾರಂಭದಲ್ಲಿ ಧ್ವಜ ಪೀಠದ ಬಳಿ ಸ್ಥಾನಿಕರು ಚೂರ್ಣಿಕೆಯನ್ನು ಹೇಳುವುದು ಸಂಪ್ರದಾಯವಾಗಿತ್ತು.

ಮೈಸೂರು ಸಂಪ್ರದಾಯದ ಭರತನಾಟ್ಯ ಪ್ರಕಾರದಲ್ಲಿ ಚೂರ್ಣಿಕೆಗಳನ್ನು ಅಭಿನಯಿಸುವ ಪದ್ಧತಿ ಹೆಚ್ಚಾಗಿ ಇತ್ತು. ಇಲ್ಲಿ ಲಾಸ್ಯವೇ ಪ್ರಮುಖ. ಅಭಿನಯವೇ ಜೀವಾಳ. ಸಾಮಾನ್ಯವಾಗಿ ರಂಗಪೂಜೆಯ ಬಳಿಕ ನಡೆಯುವ ಕಾರ್ಯಕ್ರಮವಿದು. ಸಾಮಾನ್ಯವಾಗಿ ಕಲಾವಿದೆಯು ಬಣ್ಣ ಬಣ್ಣದ ಕೋಲುಗಳನ್ನು ಹಿಡಿದು ರಂಗದಲ್ಲಿ ನಡೆದು ಬಂದು ರಂಗದ ಮಧ್ಯೆ ಭಕ್ತಿಯಿಂದ ಕೋಲುಗಳನ್ನಿಟ್ಟು ನಮಸ್ಕರಿಸಿ; ಹಿಂದೆ ತೆರಳಿ ಚೂರ್ಣಿಕೆಯನ್ನು ಆರಭಿರಾಗದಲ್ಲಿ ಒಂದೇ ಸಮನೆ ಹಾಡುವುದು ಪದ್ಧತಿ. ಈಗ ಅಭಿನಯವನ್ನೂ ಮಾಡಲಾಗುತ್ತದೆ.

ನೃತ್ಯದಲ್ಲಿ ಬಳಸುವ ಚೂರ್ಣಿಕೆಗಳು ನಾಯಕನ ಅಥವಾ ದೇವರ ಕುರಿತಾದುವು. ರಾಮಕಥಾ ಚೂರ್ಣಿಕೆ, ಭರತಕಲ್ಪ ಲತಾಮಂಜರಿಯ ಪ್ರಾರಂಭದಲ್ಲಿರುವ ತೆಲುಗು ಚೂರ್ಣಿಕೆಗಳು ಪ್ರಸಿದ್ಧವಾದವು. ಲಯ ಗತಿಗಳಿಂದ ಕೂಡಿದ ಚೂರ್ಣಿಕೆಗಳಂತೆ ದಂಡಕಗಳು( ಉದಾ:-ಶ್ಯಾಮಲಾ ದಂಡಕ) ಕೂಡಾ ಅಭಿನಯ ಯೋಗ್ಯ.

ಶುಭ ಸಂದರ್ಭಗಳಲ್ಲಿ ಮಧ್ಯಾಹ್ನದ ಭೋಜನ ಅವಧಿಯಲ್ಲೂ





ಚೂರ್ಣಿಕೆ ಬಳಸುವ ಪದ್ಧತಿ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಶುಭ ಸಂದರ್ಭಗಳಲ್ಲಿ ದೇವರ ಸ್ಮರಣೆ ಮಾಡಿಕೊಂಡು ಸಾವಧಾನವಾಗಿ ಭೋಜನ ಮಾಡುವುದು ಸಂಸ್ಕೃತಿ. ಜೊತೆಗೆ ಸಾಂಸ್ಕೃತಿಕ ರಂಗವೂ ಅಲ್ಲಿ ಅರಳುತ್ತದೆ. ಇತ್ತೀಚೆಗೆ ಕೀರ್ತನೆ, ಶ್ಲೋಕಗಳನ್ನು ಹೇಳುವ ಪರಿಪಾಠ ಹೆಚ್ಚು. ಪ್ರತೀ ಚೂರ್ಣಿಕೆಯ ಕೊನೆಯಲ್ಲಿ 'ಹರ ನಮಃ ಪಾರ್ವತೀಪತಯೇ ಹರಹರ-ಮಹಾದೇವ' ಎಂಬ ಸಮೂಹ ಕೂಗು ಪರಿಚಯ ಮತ್ತು ಉತ್ಸಾಹವನ್ನು ಇಮ್ಮಡಿಗೊಳಿಸಿದರೆ, ಅಂತ್ಯದಲ್ಲಿ 'ಭೋಜನಾಂತೇ ವೇಣುಗೋಪಾಲ ಸ್ಮರಣೇ ಗೋವಿಂದ- ಗೋವಿಂದ' ಎಂಬ ಜೈಕಾರ ಸಾಮೂಹಿಕ ಪ್ರಜ್ಞೆ, ಒಮ್ಮತವನ್ನು ಹೆಚ್ಚಿಸುತ್ತದೆ. ಗಾಯಕನ, ಕಲಾವಿದನ ಪ್ರತಿಭೆಗೆ ಕನ್ನಡಿ ಹಿಡಿಯುವ, ಕವಿಹೃದಯಗಳಿಗೆ ರಂಜಿಸುವ ಪ್ರಕಾರವಾಗಿರುವ ಚೂರ್ಣಿಕೆಗಳಿಗೆ, ಪ್ರಬುದ್ಧ ಪ್ರತಿಭೆಗಳಷ್ಟೇ ಜೀವ ತುಂಬಿಯಾರು.

## ವಚನ

**ವ**ಚನ ಎಂದರೆ ಒಳ್ಳೆಯ ಮಾತು ಎಂದರ್ಥ. ಭಾಷೆ ಕೊಡುವುದು, ಕಟಿಬದ್ಧರಾಗುವುದು ಎಂಬ ಮಾತೂ ಚಾಲ್ತಿಯಲ್ಲಿದೆ. ಸುಮಾರು ೧೨ ಶತಮಾನದ ಈಚೆಗೆ ಕಂಡುಬಂದ ಶಿವಶರಣರ ಹಲವು ಸಮಾಜ ಕ್ರಾಂತಿಯ, ಜ್ಞಾನಯಜ್ಞದ ಫಲವೇ ಈ ವಚನಗಳು. ಕನ್ನಡ ಸಾಹಿತ್ಯಕ್ಕೆ ಇವು ನೀಡಿದ ಕೊಡುಗೆ ಅಷ್ಟಿಷ್ಟಲ್ಲ.

ಬಸವೇಶ್ವರರು, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ... ಹೀಗೆ ಅನೇಕಾನೇಕ ಶಿವ ಶರಣರ, ಶರಣೆಯರ ಜೀವನಾನುಭವ, ಭಗವಂತನ ಜೊತೆಗಿನ ಸಂಬಂಧ-ಸಮರ್ಪಣೆ, ಸಾಮಾಜಿಕ-ವೈಯ್ಯಕ್ತಿಕ ನಡವಳಿಕೆಗಳು, ನೈತಿಕ ಮೌಲ್ಯಗಳು, ಪೊಳ್ಳು ಆಚರಣೆ- ಕರ್ಮಟ ನಂಬಿಕೆಗಳು..ಮುಂತಾದ ಹತ್ತು ಹಲವು ನಿರೂಪಣೆಗಳುಳ್ಳ ಸುಮಾರು ಲಕ್ಷಕ್ಕೂ ಹೆಚ್ಚು ವಚನಗಳು ಚಿಕ್ಕದಾಗಿ, ಚೊಕ್ಕದಾಗಿದ್ದು ಸಾಮಾನ್ಯ ಜನಕ್ಕೂ ಅರ್ಥವಾಗುವಂತಿದೆ.

ಇದನ್ನು ನೃತ್ಯದಲ್ಲಿ ಚಿಕ್ಕದಾಗಿಯೂ, ವಿವರವಾಗಿಯೂ ಭಾವ ತನ್ಮಯತೆಯಿಂದ ಅಭಿನಯಿಸುವ ಕ್ರಮ ಇತ್ತೀಚಿನ ಹತ್ತು ಹದಿನೈದು ವರ್ಷಗಳಿಂದ ಜನಪ್ರಿಯವೆನಿಸಿದೆ. ಇವು ಉತ್ತಮ ಲಯದಲ್ಲಿದ್ದು, ಇಷ್ಟವೆನಿಸುವ ರಾಗವನ್ನು ಬಳಸಿಕೊಳ್ಳುವ ಸರಳತೆಯನ್ನು ಹೊಂದಿದ್ದು, ಕನ್ನಡ ಭಾಷೆಯಲ್ಲಿರುವ ಕಾರಣ ಅಭಿನಯಿಸಲು, ಅರ್ಥೈಸಿಕೊಳ್ಳಲೂ ಸುಲಭವೆನಿಸಿಕೊಳ್ಳುತ್ತವೆ.

# ಸಂಗೀತ ನೃತ್ಯ 'ಲಕ್ಷಣ'ಗಳ ಪಿತಾಮಹ

## ಪುಂಡರೀಕ ವಿಠಲ

—'ಮನೂ' ಬನ

**ಭ**ರತನ ನಾಟ್ಯಶಾಸ್ತ್ರದಿಂದ ಆರಂಭವಾಗಿ ಇತ್ತೀಚಿನವರೆಗೂ ಅನೇಕ ಸಂಗೀತ–ನೃತ್ಯ ಶಾಸ್ತ್ರ ಗ್ರಂಥಗಳು ಹೊರಬಂದಿವೆ. ಆದರೆ ಅವುಗಳಲ್ಲಿ ಕಣ್ಮರೆಯಾಗಿ ಹೋದದ್ದೇ ಹೆಚ್ಚು. ಇದೇ ಸಾಲಿಗೆ ಸೇರಿಹೋಗುವ ಅಪಾಯ ಎದುರಿಸುತ್ತಿದ್ದ ೧೬ನೇಯ ಶತಮಾನದ ನಾಲ್ಕು ಗ್ರಂಥಗಳ ಸಮಗ್ರ ಸಂಪುಟವೇ **ಪುಂಡರೀಕಮಾಲಾ.**

**ಪುಂಡರೀಕ ವಿಠಲ :** ಕರ್ನಾಟಕ ಸಂಗೀತ, ಹಿಂದೂಸ್ಥಾನೀ ಸಂಗೀತ ಮತ್ತು ನರ್ತನಶಾಸ್ತ್ರ, ಅಲಂಕಾರ, ನಾಟಕ, ಕೋಶ, ಪರ್ಶಿಯನ್ ಸಂಗೀತ,..ಹೀಗೆ ಅನೇಕ ವಿದ್ಯೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದ ಏಕೈಕ ವಿದ್ವಾಂಸ ಈತ. ಸದ್ರಾಗ ಚಂದ್ರೋದಯ, ರಾಗಮಂಜರೀ, ರಾಗಮಾಲಾ ಮತ್ತು ನರ್ತನ ನಿರ್ಣಯ ಎಂಬುವೇ ಈತನ ವಿದ್ವತ್ತಿಗೆ ಸಾಕ್ಷಿಯಾಗಿರುವ ನಾಲ್ಕು ಮುಖ್ಯ ಗ್ರಂಥಗಳು.

ಕರ್ನಾಟಕ ಮತ್ತು ಹಿಂದೂಸ್ಥಾನೀ ಸಂಗೀತ, ನರ್ತನ–ಮುಂತಾದ ಭಾರತದ ಮುಖ್ಯ ಶಾಸ್ತ್ರೀಯ ಕಲೆಗಳ ಆಧುನಿಕ ರೂಪಗಳಿಗೆ ನಾಂದೀ ವಾಚನವನ್ನು ಮಾಡಿದ ಆದ್ಯಾಚಾರ್ಯನೇ ಪುಂಡರೀಕ ! ಸಂಗೀತ–ನೃತ್ಯಗಳನ್ನು ಉತ್ತರಭಾರತದಲ್ಲೂ ಪ್ರಚಾರ ಮಾಡಿ ಮಹಾವಿದ್ವಾಂಸನೆನಿಸಿಕೊಂಡ ಈತನು ಕನ್ನಡಿಗನೆನ್ನಲು ಮತ್ತಷ್ಟು ಹೆಮ್ಮೆ. ಪುರಂದರದಾಸರ ಸಮಕಾಲೀನ ಕೂಡ ! ಹೀಗಾಗಿ ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದರೆ, ಪುಂಡರೀಕ ವಿಠಲನನ್ನು ಕರ್ನಾಟಕ ಸಂಗೀತ–ನೃತ್ಯ ಲಕ್ಷಣಗಳ ಪಿತಾಮಹನೆನ್ನಲು ಅಡ್ಡಿಯಿಲ್ಲ ಎನ್ನುತ್ತಾರೆ ವಿಮರ್ಶಕರು !


ಪುಂಡರೀಕ ವಿಠಲನು ಹುಟ್ಟಿದ್ದು ಕರ್ನಾಟಕದ ಶಿವಗಂಗೆ ಕ್ಷೇತ್ರದ ಬಳಿಯಿರುವ ಸಾತನೂರು ಗ್ರಾಮದಲ್ಲಿ. ಹದಿನಾರನೆಯ ಶತಮಾನದ ಮಧ್ಯಭಾಗ ಈತನ ಕಾಲ. ಸಾತನೂರಿನ ವಿಠಲರಾಯಸ್ವಾಮಿ ಈತನ ಕುಲದೈವ. ಜಮದಗ್ನಿ ಗೋತ್ರಕ್ಕೆ ಸೇರಿದ ಭಾಗವತ ಶಿರೋಮಣಿ ಎನಿಸಿಕೊಂಡಿದ್ದ ವಿಠಲಯ್ಯ(ವಿಠಲಾರ್ಯ) ಮತ್ತು ದೇಮಕ್ಷ(ದೇಮಕ್ಕ, ದ್ಯಾಮಕ್ಕ) ಈತನ ತಂದೆ ತಾಯಿಯರು. ಈತನಿಗೆ ಪಂಡರೀವಿಠ್ಠಲ ಎಂಬ ಹೆಸರೂ ಇದೆ.

ಒಮ್ಮೆ ಸಂಗೀತದ ಹಿರಿಮೆಯನ್ನು ಪ್ರಚಾರ ಮಾಡಲು ಪುಂಡರೀಕನು ಉತ್ತರಭಾರತದಲ್ಲಿ ಸಂಚರಿಸುತ್ತಿದ್ದಾಗ ಅಕ್ಬರನ ಸಾಮಂತ ರಾಜರುಗಳಾದ





ಬುರಹಾನಖಾನ್, ಮಾಧವಸಿಂಹ ಇವರುಗಳ ಭೇಟಿಯಾಯಿತು., ಈತನ ವಿದ್ವತ್ತನ್ನು ಮನಗಂಡು ಅವರು ತಮ್ಮ ಆಸ್ಥಾನದಲ್ಲಿ ಆಶ್ರಯಕೊಟ್ಟರು ಮತ್ತು ಈತನು ಕಲಿತ ವಿದ್ಯೆ–ಪ್ರಯೋಗಗಳನ್ನು ಸಮನ್ವಯಗೊಳಿಸಿ ಗ್ರಂಥ ರಚಿಸಿ ಸಂಗೀತ ಪ್ರಪಂಚಕ್ಕೆ ಉಪಕರಿಸಬೇಕೆಂದು ಕೇಳಿಕೊಂಡರು. ಪರಿಣಾಮವೇ, ಸದ್ರಾಗಚಂದ್ರೋದಯ ಮತ್ತು ರಾಗಮಂಜರಿ ಗ್ರಂಥಗಳು. ಸದ್ರಾಗಚಂದ್ರೋದಯು ಕರ್ನಾಟಕ ಸಂಗೀತದ ರಾಗಪ್ರಪಂಚವನ್ನು ಸ್ವರ, ಸ್ವರಮೇಲ, ಆಲಪ್ತಿಯೆಂಬ ಮೂರು ಭಾಗಗಳಲ್ಲಿ ಹಿಡಿದಿಟ್ಟಿರುವ ಒಟ್ಟು 278 ಶ್ಲೋಕಗಳ ಗ್ರಂಥ. ರಾಗಮಂಜರೀ 154 ಶ್ಲೋಕಗಳನ್ನು ಹೊಂದಿರುವ ಹಿಂದೂಸ್ಥಾನೀ ರಾಗಗಳ ಗ್ರಂಥ.





ನಂತರ ಕಾಲಾಂತರದಲ್ಲಿ ಅಕ್ಬರನ ಆಸ್ಥಾನದಲ್ಲೂ ಪ್ರಮುಖ ವಿದ್ವಾಂಸನೆನಿಸಿ ಅವನ ಅಪೇಕ್ಷೆಯಂತೆ ರಾಗಮಾಲಾ ಮತ್ತು ನರ್ತನ ನಿರ್ಣಯ ಅಥವಾ ನರ್ತಕ ನಿರ್ಣಯವನ್ನು ರಚಿಸಿದ. ಇದರಲ್ಲಿ ನರ್ತನ ನಿರ್ಣಯದ ಕೆಲವು ಭಾಗಗಳು ಸಂಗೀತಕ್ಕೆ ಸಂಬಂಧಿಸಿವೆಯಾದರೂ ಪ್ರಧಾನ ಅಧ್ಯಾಯಗಳು ನೃತ್ಯಕ್ಕೆ ಸಂಬಂಧಿಸಿದೆ. ಒಟ್ಟು 1860 ಶ್ಲೋಕಗಳ ಗ್ರಂಥವಿದು. 212 ಶ್ಲೋಕಗಳ ರಾಗಮಾಲಾ ಗ್ರಂಥವು ಹಿಂದೂಸ್ಥಾನೀ ಸಂಗೀತ ಪ್ರಪಂಚವನ್ನು ವಿವರಿಸುತ್ತದೆ. ಮಾತ್ರವಲ್ಲದೆ ಎಲ್ಲಾ ಕಲೆಗಳಲ್ಲಿ ಈತನ ಪರಿಶ್ರಮ ಮನಗಂಡು ಅಕ್ಬರನು 'ಅಕಬರೀಯ ಕಾಲಿದಾಸ' ಎಂಬ ಬಿರುದನ್ನು ಕೊಟ್ಟು ಗೌರವಿಸಿದನೆನ್ನಲಾಗಿದೆ.

ಈ ಎಲ್ಲಾ ಕುಲ–ಗೋತ್ರ ಪ್ರವರಗಳನ್ನು ಮಾತ್ರ ಪುಂಡರೀಕನು ಗ್ರಂಥಗಳಲ್ಲಿ ಹೇಳಿದ್ದಾನೆಯೇ ಹೊರತು ಸಂಗೀತ–ನೃತ್ಯ ಶಾಸ್ತ್ರಗಳನ್ನು ಎಲ್ಲಿ, ಯಾರಿಂದ ಕಲಿತನೆಂದು ಸೂಚಿಸಿಲ್ಲ. ಆದರೆ ಸಾತನೂರಿನ ಸುತ್ತಮುತ್ತಲಿನ ಪರಿಸರಗಳಾದ ಕುಣಿಗಲ್, ಬಿಜಾಪುರ, ಮಾಗಡಿ, ಮೈಸೂರು ಹಿಂದಿನ ಕಾಲದಿಂದಲೂ ಸಂಗೀತ–ನೃತ್ಯ ಪರಿಸರಗಳಾಗಿದ್ದು ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಈತನಿಗೆ ಎಲ್ಲಾ ಶಾಸ್ತ್ರಗಳ ಪರಿಚಯ ಸುಲಭಸಾಧ್ಯವಾಗಿರಬಹುದು.

ಪುಂಡರೀಕನು ರಚಿಸಿದ್ದು ಒಟ್ಟು ಆರು ಗ್ರಂಥಗಳು. ರಾಗಮಾಲಾವು ನರ್ತನನಿರ್ಣಯದಿಂದ ಉಲ್ಲೇಖಗೊಂಡಿರುವುದರಿಂದ ಇದನ್ನು ಪ್ರತ್ಯೇಕ ಗ್ರಂಥ ಎನ್ನಲಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಉಳಿದವುಗಳಲ್ಲಿ ದೂತಿಕರ್ಮವೆಂಬ ಗ್ರಂಥ ದೂತಿ, ನಾಯಕ–ನಾಯಿಕಾ ಭಾವಗಳನ್ನು ವಿವರಿಸಿದ್ದರೆ, ಶೀಘ್ರಭೋಧಿನೀ ನಾಮಮಾಲಾ

**(..21ನೇ ಪುಟಕ್ಕೆ ಮುಂದುವರೆದಿದೆ)**

# ಹಸ್ತ ಮಯೂರಿ



ಶಿಖರ ಹಸ್ತ

**ಲಕ್ಷಣ:** ಮುಷ್ಟಿಹಸ್ತದಲ್ಲಿನ ಹೆಬ್ಬೆರಳನ್ನು ಮೇಲ್ಮುಖವಾಗಿ ನೀಡಿದರೆ ಅಥವಾ ಹೆಬ್ಬೆರಳನ್ನು ನಿಡಿದಾಗಿರಿಸಿ ಉಳಿದ ಬೆರಳುಗಳನ್ನು ಮುಷ್ಠಿಯೊಳಗೆ ಸೇರಿಸುವುದು ಶಿಖರಹಸ್ತ, ಶಿಖರದ ಅರ್ಥ ಗೋಪುರ ಅಥವಾ ಮೇಲೆ.

ಶಿವನು ಮೇರುಪರ್ವತವನ್ನು ಬಿಲ್ಲಿನಂತೆ ಪ್ರಯೋಗಿಸಿದಾಗ ಈ ಹಸ್ತ ಉಗಮವಾಯಿತೆನ್ನಲಾಗಿದೆ. ಇದರ ಬಣ್ಣ ಕಪ್ಪು, ಗಂಧರ್ವ ಜಾತಿ, ಜಿಹ್ನ(ಜಹ್ನು) ಋಷಿ, ರತಿ ವಲ್ಲಭ ಇದರ ದೇವತೆ. ಒಡಿಸ್ಸಿ ನೃತ್ಯಪ್ರಕಾರದಲ್ಲಿ ಶಿಖರಕ್ಕೆ ಆರಾತ್ರಿಕ ಎಂದು ಹೆಸರು.

*ಯೋಗದಲ್ಲಿ ಬಳಸುವ ಶಾಸ್ತ್ರೀಯ ಮುದ್ರೆಗಳಾದ ನೃಸಿಂಹ ಮುದ್ರಾ(ಒಂದು ಕೈಯ್ಯ ಶಿಖರ), ದೀಪ ಮುದ್ರಾ(ಎರಡು ಕೈಯ್ಯ ಶಿಖರ)_ಮೇರುದಂಡ ಮುದ್ರೆಗಳಲ್ಲಿ ಶಿಖರಕ್ಕೆ ಪ್ರಧಾನ ಸ್ಥಾನ. ಎರಡೂ ಕೈಯ್ಯಲ್ಲಿ ಶಿಖರಮುದ್ರೆಯನ್ನು ಅಭಿಮುಖವಾಗಿ ಹಿಡಿದು ಹೆಬ್ಬೆರಳುಗಳನ್ನು ಒಂದಕ್ಕೊಂದು ತಾಗಿಸುವುದು ಕಾಲಕರ್ಣಿಕಾ ಮುದ್ರಾ ಎನಿಸಿದರೆ, ಎದೆಯ ಮುಂದೆ ಎರಡೂ ಕೈಯ್ಯ ಉಳಿದೆಲ್ಲಾ ಬೆರಳುಗಳನ್ನು ಮಡಚಿ ಪರಸ್ಪರ ಹೆಬ್ಬೆರಳನ್ನು ಸೇರಿಸುವ ರುದ್ರ ಮುದ್ರಾ ಇನ್ನೊಂದು ಬಗೆ. ನೈವೇದ್ಯಕ್ಕಾಗಿ, ಶಿಲ್ಪಗಳಲ್ಲಿ, ಬಿಂಬಗಳಲ್ಲಿ ದೈವೀಸಾನ್ನಿಧ್ಯ ಸಂಸ್ಥಾಪನೆಗಾಗಿ, ಆ ದೇವದೇವಿಯರನ್ನು ಆವಾಹನೆ ಮಾಡುವಾಗ ಉಪಯೋಗಿಸುವ ಅವಕುಂಠಿತೋಭವ : ಅವಕುಂಠನಮುದ್ರಾ – ಎರಡು ಶಿಖರ ಹಸ್ತಗಳ ಪರಸ್ಪರ ಸಹಜತ್ವದಲ್ಲಿ ಒಳ ಪಾರ್ಶ್ವಗಳ ಕೂಡುವಿಕೆಯಿಂದುಂಟಾದ ಹಸ್ತ.*

*ದಿನನಿತ್ಯ ಜೀವನದಲ್ಲೂ ಏಕೆ ಮುಂತಾಗಿ ಪ್ರಶ್ನೆ ಕೇಳಲು, ಗೊತ್ತಿಲ್ಲ ಎನ್ನಲು, ಗಡ್ಡದ ಮೇಲೆ ಕೈಯಿಟ್ಟು ಯೋಚನೆ ಮಾಡುವಾಗ, ವಿಜಯದ ಸಂಕೇತವಾಗಿ ಶಿಖರ ಬಳಸಲ್ಪಡುತ್ತದೆ.*

**ವಿನಿಯೋಗ:** ಮನ್ಮಥ, ಧನುಸ್ಸು, ಕಂಬ, ನಿಶ್ಚಯ ಮಾಡುವುದು, ಪಿತೃ ತರ್ಪಣ, ತುಟಿ, ಪಾತ್ರೆಗಳಿಗೆ ನೀರು ಹಾಕುವುದು, ಹಲ್ಲುಗಳು, ಪ್ರಶ್ನೆ ಕೇಳುವ ಭಾವ, ಶಿವಲಿಂಗ, ಇಲ್ಲವೆನ್ನುವಿಕೆ, ನೆನಪಿಸಿಕೊಳ್ಳುವುದು, ಅಭಿನಯಿಸುವುದು, ನಡುಕಟ್ಟನ್ನು ಕಟ್ಟುವುದು, ಆಲಿಂಗನ ಮಾಡುವುದು, ಶಕ್ತ್ಯಾಯುಧ ತೋಮರಾಯುಧಗಳ ಪ್ರಯೋಗ, ಘಂಟಾನಾದ, ಅರೆಯುವುದು.

**ಇತರೆ ವಿನಿಯೋಗ:** ಪಟ್ಟಾಭಿಷಿಕ್ತರಾಜ, ಕೂದಲ ಸಿಕ್ಕು ಬಿಡಿಸುವಿಕೆ, ಸ್ಥಿರವಾದ





ಕೀರ್ತಿ, ಬೀಸಣಿಗೆ, ನಾಚಿಕೆ, ಸುವರ್ಣ ಕಲಶದ ನೀರನ್ನು ಕುಡಿಯುವುದು, ಲಗಾಮು, ಒಂದು ಬಗೆಯ ಹುಲ್ಲು ಕಡ್ಡಿ, ತುಟಿ–ಪಾದ ಇವುಗಳಿಗೆ ಬಣ್ಣ ಹಚ್ಚುವುದು, ಮೊನಚು ಲೋಹದ ತುಂಡು ಮತ್ತು ಅದನ್ನು ಎಸೆಯುವುದು, ಮುಂಗುರುಳು ಹಿಡಿಯುವುದು, ಕೊಡುವುದು, ಯಮ, ಬೇಟೆಗಾರ, ಸ್ನೇಹಿತ, ಹಡಗು ಚಾವಡಿ, ಒತ್ತಾಯ, ಕೂದಲನ್ನು ಎತ್ತುವುದು, ಒನಕೆ, ಬರೆವ ಆಣಿ, ಕೊಕ್ಕು, ಅಂಕುಶ, ಮೈನೋವಿಗೆ ಗುದ್ದುವುದು, ಗಣೇಶನಿಗೆ ನಮಸ್ಕಾರ ತೋರಿಸಲು, ಕೆಲವು ವೇಳೆ ನಾಟ್ಯಾರಂಭಕ್ಕೂ ಬಳಸುತ್ತಾರೆ.

ರಾಮ, ವರುಣ, ಕುಬೇರ, ಶನೈಶ್ಚರ, ಸಹದೇವರನ್ನು ಸೂಚಿಸುವಲ್ಲಿ; ಚತುರ್ವರ್ಣಗಳಲ್ಲಿ ಕ್ಷತ್ರಿಯ, ಶೂದ್ರ ವರ್ಣಗಳನ್ನು, ದಂಪತಿ, ತಂದೆ, ಪುತ್ರ, ಮಾವ, ಅಳಿಯ, ಗಂಡ, ಸೋದರ ಮುಂತಾದ ಪುರುಷಸಂಬಂಧಗಳನ್ನು ಸೂಚಿಸಲು, ಸಂಕರ ಹಸ್ತ ಪ್ರಕಾರದಲ್ಲಿ ಕೌಮಾರ್ಯ ವಯಸ್ಸನ್ನು ಹೇಳಲು ಬಳಸಲಾಗುತ್ತದೆ. ಬಲಗೈ ಶಿಖರವನ್ನು ಎಡಭುಜದಲ್ಲಿ ತೋರಿಸುವುದರಿಂದ ಲಕ್ಷ್ಮಣನೆಂದೂ, ಬಲಗೈ ಶಿಖರವನ್ನು ಬಲಭುಜದಲ್ಲಿ ತೋರಿಸುವುದರಿಂದ ಭರತನೆಂದೂ, ಬಲಗೈ ಶಿಖರವನ್ನು ಮುಖದ ಬಳಿ ಹಿಡಿಯುವುದರಿಂದ ಶತ್ರುಘ್ನನೆಂದೂ ಅರ್ಥೈಸಬಹುದು.

ಶಿಖರಹಸ್ತಗಳನ್ನು ಎರಡು ಕೈಗಳಿಂದಲೂ ಹಿಡಿದು ಯಜ್ಞೋಪವೀತದ ಆಕೃತಿಯನ್ನು ಸೂಚಿಸುವುದು ಬ್ರಾಹ್ಮಣ ಮತ್ತು ಗುರು ಬೃಹಸ್ಪತಿಯನ್ನು ತಿಳಿಸುತ್ತದೆ. ಶಿಖರಹಸ್ತವನ್ನು ಅಲ್ಲಾಡಿಸುವುದು ಉತ್ತರ ನಕ್ಷತ್ರದ ಸೂಚನೆಯಾದರೆ, ಶಿಖರಹಸ್ತಗಳನ್ನು ಜೊತೆಯಾಗಿ ಹಿಡಿದು, ಅದರ ಮುಖಗಳನ್ನು ಅಭಿಮುಖವಾಗಿ ಸ್ಪರ್ಶಿಸುವುದು ವೃಷಭ ರಾಶಿಯ ಸೂಚಕ. ಶಿಖರಹಸ್ತಗಳನ್ನು ಅಭಿಮುಖವಾಗಿರಿಸಿದರೆ ಆಡುಪ್ರಾಣಿಯೆಂದು ಹೇಳಬಹುದು.

ನಾನಾರ್ಥ ಹಸ್ತಗಳ ವಿಭಾಗದಲ್ಲಿ, ಶಿಖರಹಸ್ತವನ್ನು ದಕ್ಷಿಣಭಾಗದಲ್ಲಿ ಕದಲಿಸದೆ ಹಿಡಿದರೆ ಸಂನ್ಯಾಸಾಶ್ರಮವೆಂದೂ, ಪುರೋಭಾಗದಲ್ಲಿ ಕದಲಿಸದೆ ಹಿಡಿದರೆ ಸ್ಥಿರವೆಂದೂ, ಅಡ್ಡಲಾಗಿ ನಿಶ್ಚಲವಾಗಿ ಹಿಡಿದರೆ 'ಹಿಡಿದುಕೋ' ಎಂಬ ಅರ್ಥವನ್ನು ಕೊಡಬಹುದು. ಶಿಖರಹಸ್ತವನ್ನು ಪುರೋಭಾಗದಲ್ಲಿ ನಿಲ್ಲಿಸಿದರೆ ಆಸನ, ಕುಳಿತುಕೊಳ್ಳಲು ಎಂಬ ಅರ್ಥ ಬರುತ್ತದೆ. ಯಕ್ಷಗಾನದಲ್ಲೂ ರಾಜ, ಹಲ್ಲುಜ್ಜುವಿಕೆ, ಬಿಲ್ಲು, ಗಂಟೆ, ವೀರ, ಪ್ರಶ್ನೆ ಮುಂತಾದ ಸಂದರ್ಭದಲ್ಲಿ ಶಿಖರ ಹಸ್ತವನ್ನು ಬಳಸಲಾಗುತ್ತದೆ.

ಎರಡು ಶಿಖರ ಹಸ್ತಗಳನ್ನು ಕೂಡಿಸಿ ಹಿಡಿಯುವುದು, ಅಥವಾ ಮೇಲ್ಮುಮುಖವಾಗಿ ಸಂಧಿಸುವುದರಿಂದ ಅದು **ದ್ವಿಶಿಖರ ಹಸ್ತ**ವೆನಿಸಿಕೊಳ್ಳುತ್ತದೆ. ಮತ್ತೊಬ್ಬರನ್ನು ಶಪಿಸುವುದು, ಚಿಟಿಕೆ ಮುರಿಯುವುದು, ಸ್ತ್ರೀಯರ ಜಗಳ, 'ಇಲ್ಲ' ಎನ್ನುವುದನ್ನು ತೋರಿಸುವಾಗ ಇದರ ಬಳಕೆಯಾಗುತ್ತದೆ.

**ದೀವಟಿಗೆ** *ಎಂಬ ನೂತನ ವೇದಿಕೆ...ಇಲ್ಲಿ ನಿಮ್ಮ ಸುತ್ತಮುತ್ತ ನಡೆದ ನೃತ್ಯ–ನಾಟ್ಯ–ನಾಟಕ–ಜಾನಪದ ಮುಂತಾದ ಪ್ರದರ್ಶನ ಕಲೆಗಳ ಒಳಿತು, ಕೆಡುಕುಗಳನ್ನು ಹಂಚಿಕೊಳ್ಳಬಹುದು. ಅಗತ್ಯತೆ–ಪ್ರಸ್ತುತತೆಗಳ ಕುರಿತು ನೀವು ಕಂಡುಕೊಂಡ ವಿಚಾರಗಳನ್ನು ಮುಕ್ತವಾಗಿ ನಿಮಗನಿಸಿದಂತೆ ತೆರೆದಿಡಬಹುದು. ಈ ಮೂಲಕ ನಿಮ್ಮ ಅಭಿಪ್ರಾಯಗಳು ಕಲಾರಾಧಕ ಮನಸ್ಸುಗಳಿಗೆ ಕೈಮರವಾಗುವ ಸಾಧ್ಯತೆಗಳಿವೆ...ಬನ್ನಿ, ಬೆಳಕು ಹರಡಿ... ಇದು ದೀಪದ ದಾರಿ...*

## ಈ ಬಾರಿಯ ದೀವಟಿಗೆಗೆ ಬಂದ ಹಣತೆಗಳು....

**ಇ**ತ್ತೀಚೆಗೆ ಬೆಂಗಳೂರಲ್ಲಿ ವಿದುಷಿ ವೈಜಯಂತಿ ಕಾಶಿ ಅವರು ಪ್ರದರ್ಶಿಸಿದ 'ಶ್ರೀಕೃಷ್ಣ ಜೀವನ' ಸೃಜನಶೀಲ ಪ್ರಯೋಗದಲ್ಲಿ ಯಕ್ಷಗಾನ ಮಹಾಕವಿ ಪಾರ್ತಿಸುಬ್ಬರ 'ಪೂತನಾಮೋಕ್ಷ'ದ ಪದ್ಯಗಳನ್ನು ಅಳವಡಿಸಿದ್ದರು. ಅದರಂತೆಯೇ ಮಂಗಳೂರಿನ ಸನಾತನ ನಾಟ್ಯಾಲಯದ ವಿದುಷಿ ಶಾರಾದಾಮಣಿ ಶೇಖರ್ ಅವರ ಶಿಷ್ಯೆ ಶಾಲ್ಮಲಿ ಘಾಟೆ– ಇವರ ಗುರುವಂದನದಲ್ಲಿ ಅಭಿನಯಕ್ಕಾಗಿ ಪಾರ್ತಿಸುಬ್ಬರ 'ಶೂರ್ಪನಖಾ ಪ್ರಕರಣ'ವನ್ನು ಸಂಯೋಜಿಸಲಾಗಿತ್ತು. ಈ ಪ್ರಯೋಗಗಳು ಎಂದೋ ಆಗಬೇಕಾದ್ದವುಗಳು. ನಮ್ಮ ಭರತನೃತ್ಯದಲ್ಲಿ ಬಳಸಬಹುದಾದ ನೂರಾರು ಪದ್ಯಗಳು ಯಕ್ಷಗಾನ ಪ್ರಸಂಗಗಳಲ್ಲಿವೆ. ಆಸಕ್ತರು ಗಮನ ಹರಿಸಿ ಯತ್ನಿಸಲೆಂದು ಆಶಯ.

**–ಡಾ। ಎಂ. ಪ್ರಭಾಕರ ಜೋಷಿ, ಸಂಶೋಧಕರು, ಮಂಗಳೂರು.**

**R**hythmotion- ಶಾಸ್ತ್ರೀಯ ಮತ್ತು ಸಮಕಾಲೀನ ನೃತ್ಯ ತರಬೇತಿ ಸಂಸ್ಥೆಯು ಆಗಸ್ಟ್ ೯ ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ Deaf Aid Society ಗೆ ಧನಸಹಾಯ ನೀಡುವ ದೃಷ್ಟಿಯಿಂದ ವಿಶೇಷ ಕಾರ್ಯಕ್ರಮ ಆಯೋಜಿಸಿತ್ತು. ಸಂಸ್ಥೆಯ ಮತ್ತು ಶೈಲಾ ಕೊತ್ವಾಲ ಅವರ ಕಿವುಡರಿಗಾಗಿ ಇರುವ ಸಂಸ್ಥೆಯ ವಿಶೇಷ ವಿದ್ಯಾರ್ಥಿಗಳು ಈ ಕಾರ್ಯಕ್ರಮ ನಡೆಸಿಕೊಟ್ಟರು. ಬೆಂಗಳೂರು ದೂರದರ್ಶನದ ನಿರ್ದೇಶಕ ಮಹೇಶ್ ಜೋಷಿ ಉದ್ಘಾಟಿಸಿದ ಕಾರ್ಯಕ್ರಮಕ್ಕೆ, ನೃತ್ಯ ಗುರುಗಳಾದ ಮಾಯಾ ರಾವ್, ಲಲಿತಾ ಶ್ರೀನಿವಾಸನ್, Deaf Aid Society ಯ ಅಧ್ಯಕ್ಷ ಏರ್ ಮಾರ್ಷಲ್ ದಾಸ್ತೂರ್ ಅವರು ಮುಖ್ಯ ಅತಿಥಿಗಳಾಗಿದ್ದರು. ಇಂತಹ ವಿಶೇಷ ಕಾರ್ಯಕ್ರಮಗಳು ಮತ್ತಷ್ಟು ಮೂಡಿ ಬರಲಿ, ದಾರಿದೀಪವಾಗಲಿ.

**–ಸಂಪಾದಕರು, 'ದೃಷ್ಟಿ' ನಿಯತಕಾಲಿಕೆ, ಬೆಂಗಳೂರು.**





**ನೃ**ತ್ಯದಲ್ಲಿ ಭಾವಾರ್ಥ ತಿಳಿಯದೆ ಅಭಿನಯ ಮಾಡಿದಲ್ಲಿ ರಸಾಸ್ವಾದನೆಗೆ ಭಂಗ ಬರುತ್ತದೆ ಎಂಬುದನ್ನು ಕಲಾವಿದರು, ನೃತ್ಯಸಂಯೋಜಕರು ಅರ್ಥ ಮಾಡಿಕೊಳ್ಳಬೇಕು. ಉದಾ:– ಇತ್ತೀಚೆಗೆ ಮಂಗಳೂರಿನ ಪುರಭವನದಲ್ಲಿ ನಡೆದ ನೃತ್ಯ ಪ್ರದರ್ಶನದಲ್ಲಿ 'ಉಳ್ಳವರು ಶಿವಾಲಯವ ಮಾಡುವರು' ವಚನದಲ್ಲಿ ಕಲಾವಿದೆಯು ಪ್ರದರ್ಶಿಸಿದ ಭಾವ ಯಾಕೋ ಅಪ್ರಸ್ತುತವೆನಿಸಿತು. ಅಪೇಕ್ಷಣೀಯವಲ್ಲದ ಹೆಚ್ಚಾದ ದುಃಖಭಾವ; ವಚನದಲ್ಲಿರುವ 'ದೇಹವೇ ದೇವಾಲಯ' ಎಂಬ ಧನ್ಯ ಭಾವವನ್ನೇ ಮರೆಸಿತ್ತು. ಬದಲಾಗಿ ಶರಣನು ತಾನೂ ಏನೂ ಮಾಡಲೂ ಸಾಧ್ಯವಿಲ್ಲದ ಅಸಹಾಯಕ, ಹಣವಿದ್ದರೆ ತಾನೂ ದೇವಾಲಯ ಕಟ್ಟಿಬಿಡುತ್ತಿದ್ದೆ, ಅಂತಹ ಸಿರಿವಂತಿಕೆ ತನಗೆ ಬೇಕಿತ್ತು, ಅದರಲ್ಲೂ ಉಳ್ಳವರು ಅಥವಾ ಶಿವಾಲಯ ಕಟ್ಟಿಸುವವರು ದರ್ಪ ದೌರ್ಜನ್ಯದಿಂದ ಮೆರೆಯುತ್ತಾರೆ, ಭಕ್ತಿಯಿಂದ ಕಟ್ಟಿಸುವವರಲ್ಲ, ಶ್ರೀಮಂತಿಕೆ ಮೆರೆಯಲೆಂದೇ ಕಟ್ಟಿಸುತ್ತಾರೆ ಎಂದೇ ಬಿಂಬಿಸಲಾಯಿತು. ಇಂತಹ ಸಂಯೋಜನೆಗಳಿಂದ ತಪ್ಪು ಅರ್ಥಗಳೇ ಜಾಸ್ತಿ ಎಂಬುದು ನನ್ನ ಭಾವನೆ. ಈ ನಿಟ್ಟಿನಲ್ಲಿ ಹಿರಿ–ಕಿರಿಯರೆನ್ನದೆ ಗುರು–ಕಲಾವಿದರು ದಿಟ್ಟವಾಗಿ ಪ್ರಯತ್ನಿಸಿದರೆ ಪ್ರದರ್ಶಿಸುವವರಿಗೂ, ನೋಡುಗರಿಗೂ ಧನ್ಯತೆ ಬಂದೀತು.

**–ವಿಷ್ಣುಪ್ರಸಾದ್ ಎನ್., ಮಂಗಳೂರು.**

There is a need to provide deliverance to millions of human emotions and transcend from the chaos surrounding us. It's the way to relate with people and seek beauty in creation. It's a means to dissolve differences and exemplify excellence and perseverance. Dance is a manifestation of serenity and divinity.

For the first time in the history of Indian dance, Mrs.Vyjayanthi Kashi's Shmbhavi School of dance trying to bring together all artists related to dance from different facets of life. It's an effort to provide a platform for the flourishing artists and pay tributes to the prolific performers. Personal interactions, lecture demonstrations, workshops, dance games and competitions for children, youth and all geneal public… It's all possible at the India's first Dance Fair. This non stop extravaganza stretching from morning till night on 4th and 5th october 2008 at the Chitrakala Parishad, Kumara Krupa, Bangalore.

# Dance: Poetry in Motion

✍ ***Veronica Stivala, Malta***

India's top dancer **Vyjayanthi Kashi** believes dance is like poetry. "Just as when you're fluent with your grammar, you make poetry instead of words," she says. "Dance is something so natural to me that it becomes my poetry, my breath.

**Darshana Bhramari**



**Que: Have you noticed any difference between past and present Dance tradition?**

**Ans:** ..**Y**es, Things have changed nowadays: in the past people used to dance all night. Of course, people don't have the time or the lifestyle to be able to do that. So now even though dances last less, I am still trying to give it my best...

Dance is a way of life. Now life is constantly changing. So dance changes with it. Art should not stagnate, it should relate to every person With dance there must be an equal balance between tradition and contemporary life, without losing its aesthetics..

**Que: Is dance innate to every Indian?**

**Ans: D**ance is the birthright of every human being," Kashi points out.

"However, very few believe in their body's rhythm. In India, many don't have confidence in themselves.People feel that the best way to stay in touch with culture is with the arts - this is deeply rooted in nature.In India, music and dance are considered to be the sacred offerings to the Gods.

**Que: What's Your main objective ?**

**Ans:**...**T**o bring India to the audience, to make people want to visit my homeland. Through dance I am sharing my heart. This heart

**(Continued to 23 page)**





**ರಂಗ ಭ್ರಮರಿ**

# ಮಕ್ಕಳಿಗೂ ಮಾನ್ಯತೆ ಇರಲಿ

**■ ನಿಡುವಜೆ ರಾಮ ಭಟ್, ಉಡುಪಿ**

**ಅ**ನೇಕ ಸಂಘ-ಸಂಸ್ಥೆಗಳು ಇಂದು 'ರಿಯಾಲಿಟಿ ಷೋ' ಹೆಸರಿನಲ್ಲಿ ಯಾವುದೋ ನೃತ್ಯ ಪ್ರದರ್ಶನಗಳಿಗೆ ಅವಕಾಶ ನೀಡುವುದನ್ನು ನೋಡುತ್ತೇವೆ. ಜೊತೆಗೆ ಇಂತಹ ಷೋಗಳತ್ತ ಜನತೆ ಆಕರ್ಷಿತರಾಗುವುದನ್ನೂ ಕಾಣುತ್ತೇವೆ. ಉತ್ತರಭಾರತದಲ್ಲಿ ಇಂತಹ ರಿಯಾಲಿಟಿ ಷೋದಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಲು ಹೊರಟ ಶಿಂಜಿನಿಯು ನೃತ್ಯವನ್ನು ತೀರ್ಪುಗಾರರು ಕಳಪೆ ಪ್ರದರ್ಶನವೆಂದು ಟೀಕಿಸಿರುವುದು, ತೀರ್ಪುಗಾರರೇ ಅವಹೇಳನ ಮಾಡಿರುವುದರ ಪರಿಣಾಮವಾಗಿ ಆ ಬಾಲೆ ತೀವ್ರ ಖಿನ್ನತೆಗೊಳಗಾಗಿ ಆಸ್ಪತ್ರೆ ಸೇರಿ ಚೈತನ್ಯವನ್ನೇ ಕಳೆದುಕೊಂಡು ಸಾವು-ಬದುಕಿನ ನಡುವೆ ಸೆಣಸಬೇಕಾಗಿ ಬಂದುದು; ಇತ್ತೀಚೆಗೆ ಸಾಂಸ್ಕೃತಿಕ ರಂಗವನ್ನೂ ಒಳಗೊಂಡಂತೆ ಮಾಧ್ಯಮಗಳ 'ಕಮರ್ಷಿಯಲ್' ಭಯೋತ್ಪಾದಕತೆಯ ದೊಡ್ಡ ಸುದ್ದಿ.

ಬೆಳೆಯುವ ಮಕ್ಕಳಿಗೆ ಪುಷ್ಟಿಕರವಾದ ಆಹಾರ, ಪ್ರೀತಿ, ಮಮತೆಗಳಂತೆ ಮಾನ್ಯತೆ-ಪ್ರೋತ್ಸಾಹಗಳೂ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಅತ್ಯಗತ್ಯ. ಮಗು ಬೆಳವಣಿಗೆಯ ಒಂದೊಂದು ಮೆಟ್ಟಿಲನ್ನು ಹತ್ತಿದಾಗ ಮತ್ತು ಹೊಸ ಕೌಶಲವನ್ನು ಕಲಿತಾಗ; ಅದು ಮೆಚ್ಚುಗೆಗಾಗಿ, ಮಾನ್ಯತೆಗಾಗಿ ತಂದೆ ತಾಯಿಗಳತ್ತ, ಉಪಾಧ್ಯಾಯರತ್ತ, ಹಿರಿಯರತ್ತ ನೋಡುತ್ತದೆ. ಅವರು ಅದರ ಸಾಧನೆಯನ್ನು ಗುರುತಿಸಿ, 'ಭೇಷ್' ಎಂದರೆ, ಬೆನ್ನು ತಟ್ಟಿ ಪ್ರೋತ್ಸಾಹಿಸಿರೆ, ಅದು ಇಮ್ಮಡಿ ವೇಗದಿಂದ ಮತ್ತಷ್ಟು ಸಾಧಿಸಲು, ಕಲಿಯಲು ಮುಂದಾಗುತ್ತದೆ. ಶಾಲೆಯಲ್ಲಿ ಉಪಾಧ್ಯಾಯರ ಮೆಚ್ಚುಗೆ ಗಳಿಸಲು, ಪ್ರಿಯ ಶಿಷ್ಯನಾಗಲು ಮಕ್ಕಳ ನಡುವೆ ತೀವ್ರ ಸ್ಪರ್ಧೆ ಇರುತ್ತದೆ. ಆದರೆ ಇದಕ್ಕೆ ಶಿಂಜಿನಪ್ರಕರಣ ವ್ಯತಿರಿಕ್ತವಾಗಿದೆ. ಮಾತ್ರವಲ್ಲ, ತೀರ್ಪುಗಾರರ ಕಟು ನುಡಿ ಪ್ರಶ್ನಾರ್ಹವಾಗಿದೆ.

ಬಹಳ ಸಂದರ್ಭಗಳಲ್ಲಿ ತೀರ್ಪುಗಾರರು ಹೇಳುವ ಮಾತು ಇದು.- 'ಇಂದಿನ ಈ ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲ ಮಕ್ಕಳೂ ಚೆನ್ನಾಗಿಯೇ ಭಾಗವಹಿಸಿ ಪ್ರತಿಭೆ ತೋರಿದ್ದಾರೆ. ಯಾರಿಗೆ ಬಹುಮಾನ ಕೊಡುವುದು ಎಂಬ ಗೊಂದಲಕ್ಕೆ ನಾವು ಒಳಗಾಗುವಷ್ಟು ಚೆನ್ನಾಗಿಯೇ ಸಾಮರ್ಥ್ಯ ತೋರಿದ್ದೀರಿ. ಪ್ರಥಮ, ದ್ವಿತೀಯ, ತೃತೀಯ ಎಂಬ

ಮೂರು ಸೀಮಿತ ಬಹುಮಾನಗಳಿರುವುದರಿಂದ ಉಳಿದವರು ಬಹುಮಾನ ವಂಚಿತರಾಗುವುದು ಸಹಜವೇ. ಹಾಗೆಂದು ಇಲ್ಲಿ ನಮ್ಮ ಪರಿಶ್ರಮ ವ್ಯರ್ಥವೆಂದು ಅರ್ಥವಲ್ಲ, ಸ್ಪರ್ಧೆ ಇರುವುದು ನಮ್ಮ ಒಳಗಿನ ಪ್ರತಿಭೆ ಪ್ರಕಾಶಿಸುವುದಕ್ಕೆ. ಅದಕ್ಕೆ ಉತ್ತಮ ವೇದಿಕೆ ಸಿಕ್ಕಿದೆ. ಸೋಲು-ಗೆಲುವು ಸಾಮಾನ್ಯ. ಸ್ಪರ್ಧಿಗಳು ಯಾವ ರೀತಿ ತಪ್ಪಿದ್ದಾರೆ, ಅದನ್ನು ಮುಂದಕ್ಕೆ ಹೇಗೆ ಸರಿಪಡಿಸಿಕೊಳ್ಳಬಹುದು ಎಂಬುದನ್ನು ಆಲೋಚಿಸಬೇಕು.'-

ಇಂತಹ ಪ್ರೋತ್ಸಾಹಭರಿತ ಮಾತುಗಳಿದ್ದರೆ ವಿಫಲರಾದ ಯಾವುದೇ ಅಭ್ಯರ್ಥಿಗಳೂ ಮಾನಸಿಕವಾಗಿ ನೊಂದುಕೊಳ್ಳುವುದಿಲ್ಲ, ಕುಗ್ಗುವುದಿಲ್ಲ. ತಮ್ಮ ಪ್ರಯತ್ನದಲ್ಲಿ ಯಾವ ರೀತಿ ಸೋತಿದ್ದೇವೆ ಎಂಬುದನ್ನು ಅರ್ಥೈಸಿಕೊಳ್ಳಲು ಮುಂದಾಗುತ್ತಾರೆ. ಮುಂದಕ್ಕೆ ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಾರೆ. ಜೊತೆಗೆ, ತೀರ್ಪುಗಾರರ ಇಂತಹ ನುಡಿಗಳು ಅಭ್ಯರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತದೆ. ತೀರ್ಪುಗಾರರ ಘನತೆಯನ್ನೂ ಎತ್ತಿ ಹಿಡಿಯುತ್ತದೆ. ಆದರೆ, ಈಗಿನ ಮಾಧ್ಯಮದ ರಿಯಾಲಿಟಿ ಷೋಗಳಲ್ಲಿ ಇಂತಹ ಮಾತುಗಳಿಗೆ ಬೆಲೆಯೇ ಇಲ್ಲವೇನೋ! ಒಟ್ಟಿನಲ್ಲಿ ತಮ್ಮೊಳಗಿನ ಮಾಧ್ಯಮ ಪೈಪೋಟಿಗಾಗಿ ಟಿಆರ್‌ಪಿ ರೇಟ್ ಹೆಚ್ಚಾಗಲು, ಎಂತಹ ಕೀಳು ಮಟ್ಟಕ್ಕೂ ಇಳಿದರೆ ಸಂತ್ರಸ್ತರು ಸ್ಪರ್ಧಿಗಳೇ ಹೌದು!

ತೀರ್ಪುಗಾರರೂ ಎಡವಿ ಬೀಳುತ್ತಾರೆ ಎನ್ನುವುದು ಇದಕ್ಕೇ! ಸ್ಪರ್ಧಿಗಳ ಬಗ್ಗೆ ಗಮನವಿಡದೇ ತಮ್ಮೊಳಗೇ ಬೇರೆ ವಿಚಾರಗಳನ್ನು ಮಾತಾಡುವುದು, ಮುಖ ತಿರುವುವುದು, ಮೊಬೈಲ್ ಮೆಸೇಜ್-ಸಂಭಾಷಣೆ, ಅನಗತ್ಯ ಪ್ರಶೆಗಳನ್ನು ಎತ್ತುವುದು – ಇಂತಹ ಲೋಪಗಳು ಇದೀಗ ಸಂಗೀತ-ನೃತ್ಯ ಪರೀಕ್ಷೆಗಳನ್ನೂ ಸ್ಪರ್ಧೆಗಳಲ್ಲೂ ಸಾಮಾನ್ಯವೆನಿಸಿದೆ. ಸ್ಪರ್ಧೆಯ ಕೊನೆಯಲ್ಲಿ ಯಾರಿಗೂ ನೋವಾಗದಂತೆ, ಸ್ಪರ್ಧೆಯ ಮಹತ್ವ, ಬಹುಮಾನ ವಂಚಿತರು ಯಾವ ರೀತಿಯಲ್ಲಿ ತಪ್ಪಿದ್ದಾರೆ, ಮುಂದಕ್ಕೆ ಅವರು ಹೇಗೆ ಸರಿಪಡಿಸಿಕೊಳ್ಳಬಹುದು, ಹಾಗೂ ಮುಂಬರುವ ದಿನಗಳಲ್ಲಿ ಅವರಿಗೂ ಶುಭವಾಗಲಿ ಎಂದು ಹಾರೈಸುವುದು ತೆರೆಮರೆಗೆ ಸರಿದಿದೆ.

ನಮ್ಮೂರಿನಲ್ಲಿ ಶಾಲಾ ಮಕ್ಕಳಿಗೆ ಭಗವದ್ಗೀತೆಯ ಶ್ಲೋಕಗಳ ಕಂಠಪಾಠ ಸ್ಪರ್ಧೆ ಏರ್ಪಟ್ಟಿತ್ತು. ಕೆಲ ಮಕ್ಕಳು ಇಂಪಾದ ಕಂಠದಿಂದ ಹಾಡಿದ್ದರು. ಆದರೆ ಅಷ್ಟೇನೂ ಇಂಪಾಗಿ ಹಾಡದ ಅಭ್ಯರ್ಥಿಗೆ ಪ್ರಥಮ ಬಹುಮಾನ ಬಂದಿತ್ತು. ಬಹಳ ಮಂದಿಗೆ ಇಲ್ಲಿ ತೀರ್ಪುಗಾರರ ತೀರ್ಮಾನದ ಬಗ್ಗೆ ಸಂಶಯವಾಗಿತ್ತು. ತೀರ್ಪುಗಾರರು ಇಲ್ಲಿ ತಮ್ಮ ಸ್ಪಷ್ಟೀಕರಣವನ್ನು ನೀಡುತ್ತಾ, 'ಭಗವದ್ಗೀತೆಯ ಶ್ಲೋಕದಲ್ಲಿ ಹೇಳುವಾಗ ಅಲ್ಪಪ್ರಾಣ ಮಹಾಪ್ರಾಣ, ದೀರ್ಘ-ಹ್ರಸ್ವ





ಸ್ವರಗಳ ಸ್ಪಷ್ಟ ಉಚ್ಚಾರದ ಮಹತ್ವದ್ದಾಗಿದೆ. ಇಂಪಾಗಿ ಹಾಡಿದ ಅನೇಕ ಮಕ್ಕಳು ಅಲ್ಪಪ್ರಾಣ-ಮಹಾಪ್ರಾಣಗಳ ಉಚ್ಛಾರದಲ್ಲಿ ಹೇಗೆ ತಪ್ಪಿದ್ದಾರೆ, ಅಂತಹ ಶಬ್ದಗಳು ಅರ್ಥಕ್ಕಿಂತ ಅನರ್ಥವನ್ನೇ ಕೊಡುತ್ತದೆ. ಹಾಗಾಗಿ ಪ್ರಥಮ ಬಹುಮಾನ ಪಡೆದ ಅಭ್ಯರ್ಥಿ ತನ್ನ ಉಚ್ಛಾರದ ಬಗ್ಗೆ ಸಾಕಷ್ಟು ಎಚ್ಚರ ವಹಿಸಿರುವುದನ್ನು ನಾವು ಗಮನಿಸಿ ಅಂಕಗಳನ್ನು ನೀಡಿದ್ದೇವೆ' ಎಂದಿದ್ದರು. ಇಂತಹ ತಿಳಿಸಿ ಹೇಳುವ ಮನೋಭಾವನೆ ಎಷ್ಟು ಮಂದಿ ತೀರ್ಪುಗಾರರಿಗಿದೆ?

ಸ್ಪರ್ಧೆಗಳ ಸಂದರ್ಭದ ಹೆತ್ತವರ ನಡೆ-ನುಡಿಗಳೂ ಕೂಡಾ ಪ್ರಶ್ನಾರ್ಹವೇ! ಸ್ಪರ್ಧೆಯಲ್ಲಿ ಬಹುಮಾನ ಗಳಿಕೆಯ ಹಾಗೂ ತಮ್ಮ ಪ್ರತಿಷ್ಠೆಯ ದೃಷ್ಟಿಯನ್ನಿಟ್ಟುಕೊಂಡು ಮಕ್ಕಳ ಶ್ರಮದ ಮೇಲೆ ವಿಪರೀತ ಒತ್ತಡ ಹೇರುವುದು, ಇತರ ಪ್ರತಿಭಾವಂತ ವಿದ್ಯಾರ್ಥಿಗಳೊಂದಿಗೆ ಹೋಲಿಸಿಕೊಂಡು ಮಕ್ಕಳನ್ನು ಹೀಯಾಳಿಸುವುದು, ಸ್ಪರ್ಧೆಯ ಬಹುಮಾನದ ದೊಡ್ಡ ಮೊತ್ತದ ಆಸೆಯಿಂದ ಮಕ್ಕಳಿಗೇ ಆಮಿಷವೊಡ್ಡುವುದು ಮುಂತಾದವುಗಳಿಂದ ಮಕ್ಕಳು ತೀವ್ರ ಮಾನಸಿಕ ಒತ್ತಡದಿಂದಾಗಿ ಆತಂಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.

ಇಂತಹ ಅಪಾಯಗಳ ಸಾಧ್ಯತೆಯ ಬಗ್ಗೆ ಹೆತ್ತವರು ಯೋಚಿಸಿ, ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ಆರೋಗ್ಯಕರ ಸ್ಪರ್ಧೆಗೆ ಮುಂದಾಗುವಂತೆ ತಿಳುವಳಿಕೆಯನ್ನು ನೀಡಬೇಕಾದದ್ದು ಜವಾಬ್ದಾರಿ. ಆದರೆ ಸಾಕಷ್ಟು ತಯಾರಿ ನಡೆಸಿದ ಮೇಲೂ ಸ್ಪರ್ಧೆಯ ದಿನವೂ ಕೂಡಾ ಮತ್ತಷ್ಟು ಒತ್ತಡ ಹಾಕುವುದು ಈಗಿನ ಹೆತ್ತವರ ಪರಿಪಾಠವೆನಿಸಿದೆ.

ಸ್ವಲ್ಪವೇ ಅಂತರದಲ್ಲಿ ಕಡಿಮೆ ಅಂಕ ಗಳಿಸಿ ವಿಫಲರಾದಾಗ, ಮಕ್ಕಳನ್ನು ಯಾವುದೇ ರೀತಿಯಲ್ಲಿ ಹಂಗಿಸದೇ, ದೂಷಿಸದೇ 'ಒಳ್ಳೆಯ ರೀತಿ ಸ್ಪರ್ಧೆ ನೀಡಿದ್ದಿ, ಆದಾಗ್ಯೂ ಬಹುಮಾನ ಬಂದಿಲ್ಲವೆಂದು ಬೇಸರಿಸಬೇಡ, ಮುಂದಿನ ಬಾರಿ ಉತ್ತಮ ಅವಕಾಶ ಖಂಡಿತ ದೊರಕುತ್ತದೆ' ಎಂಬ ಸಾಂತ್ವನದ ನುಡಿಯನ್ನು ಹೇಳುವುದರ ಬದಲು ಮೂದಲಿಸುವ ಅಭ್ಯಾಸ, ಮಕ್ಕಳಲ್ಲಿ ಕೀಳರಿಮೆ ಮೂಡುವಂತೆ ಮಾಡುತ್ತದೆ ಮಾತ್ರವಲ್ಲದೆ ಅವರ ಮುಂದಿನ ಪ್ರಯತ್ನಕ್ಕೂ ಅಡ್ಡಗಾಲು ಹಾಕುತ್ತದೆ.

ಶಿಂಜಿನಿಯ ಘಟನೆಯ ತಪ್ಪು-ಒಪ್ಪುಗಳ ಬಗ್ಗೆ ಇಲ್ಲಿ ಹೆಚ್ಚು ಪ್ರಸ್ತಾಪಿಸಿಲ್ಲ. ಆದರೆ ಸ್ಪರ್ಧೆಯನ್ನು ಏರ್ಪಡಿಸುವಲ್ಲಿ ಹಾಗೂ ಅಂತಹ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಾಗ ನಮ್ಮ ಜವಾಬ್ದಾರಿ ಏನು ಎಂಬುದನ್ನು ಅವಲೋಕಿಸುವುದು ಅತ್ಯವಶ್ಯಕ ಪ್ರತಿಭೆಗೆ ಮಾನ್ಯತೆ ಇರಲಿ, ಹೂ ಅರಳುವ ಮುನ್ನವೇ ಬಾಡದಿರಲಿ.

**ವರ್ಷ ಋತುವಿನ 'ವರ್ಷ'ವನ್ನು ಸ್ವಾಗತಿಸೋಣ...**
**ಹೆಸರಾಂತ ಚಿಂತಕ, ಕವಿ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರ 'ಮೊದಲ ಮಳೆ' ಕವನ ಸಂಕಲನದಿಂದಾಯ್ದ 'ಮುಗಿಲು ನಾಟ್ಯವಾಡಿತು' ಮೂಲಕ...**


ಲಲಿತ ಲಹರಿ

**ಮು**ಗಿಲು ನಾಟ್ಯವಾಡಿತು
ಜಗದ ಬಗೆಯು ಮೂಡಿತು
ಒಂದು ಸಂಜೆ
ಬಾನ ಕರೆಯೊ
ಶಿಲ್ಪಿ ಮುಗಿಲ
ಮೇಳಾ ಕಲೆತು
ನಲುಮೆಯಾಟ ತೋರಿತು
ಕನಸು ಸೀಮೆ ಮೀರಿತು
ಬಣ್ಣ ಬಣ್ಣ
ದಂಗಿ ತೊಟ್ಟ
ವಿವಿಧ ವೇಷ
ಭಾವವಾಂತು
ಹಿಗ್ಗಿಯೊಗ್ಗಿ ನಲಿಯಿತು
ಮನವು ನಟನೆಗೊಲಿಯಿತು
ಒಮ್ಮೆ ಆನೆ
ಒಮ್ಮೆ ಕುದುರೆ
ಬನವದೊಮ್ಮೆ
ಆನವದೊಮ್ಮೆ
ಹುಟ್ಟಿ ಸತ್ತು ಹುಟ್ಟಿತು
ಎದೆಯ ಕದವ ತಟ್ಟಿತು
ಆನಿಸಿ ಇನಿಸು
ಅಲೆದು ನಲಿದು
ಗಾಳಿ ಬೀಸೆ
ಮರಳಿ ಬೆರೆದು
ಮೂಲ ಬಗೆಗೆ ಮರಳಿತು
ಮನ ಬಗೆಯ ಕೆರಳಿತು

ಮರಳಿ ಮರಳಿ
ಸತ್ತು ಹುಟ್ಟಿ
ತರತರದಲಿ
ಮೆರೆದು ತಿರುಗಿ
ಮುಗಿಲ ಗರ್ಭ ಸೇರಿತು
ಅರಿವಿಗೆನೊ ಉಸುರಿತು
ಒಂದೆ ಮುಗಿಲಿ
-ನಿಂದೆ ಜನಿಸಿ
ವಿವಿಧ ವೇಷ
ವಿವಿಧ ಭಾವ
ವಿವಿಧ ನಾಟ್ಯವೇನಿದು
ಇಂದ್ರಜಾಲವಿಂತಿದು ?
ಹೃದಯ ಬಡಿಯೆ
ಮನವು ತುಡಿಯೆ
ಏನೊ ಎಂತೊ
ಅರಿಯದಂತೆ
ಫಳಿವದೊಂದು ಮಿಡಿಯಿತು
ಹೃದಯವದನೆ ನುಡಿಯಿತು
ಮಣ್ಣಿನಿಂದೆ
ಜನಿಸುತಿಲ್ಲೆ
ನಲಿದು ಮರಳು-
ತದನೆ ಬೆರೆವು-
ದಿದುವೆ ಮನುಜ ಜೀವನ
ಮುಗಿಲ ನಾಟ್ಯದರ್ಶನ
ಮಣ್ಣ ವಿವಿಧ
ಮೂರ್ತಿಯೆಲ್ಲ








ವಿವಿಧ ವೇಷ
ಭಾವವಾಂತು
ನಲಿದು ಮಣ್ಣ ಬೆರೆವವು
ಮರಳಿ ಹುಟ್ಟಿ ಬರುವವು
ಮರಳಿ ಹೊಸತೆ
ವೇಷ ಭಾವ
ನಾಟ್ಯವಾಡಿ
ನಡೆಯುತಿಹವು
ಕಾಲಬಂದು ಕರೆಯಲು
ಮಣ್ಣ ಸಂದು ಬೆರೆಯಲು

ಮುಗಿಲೆ ನಿನ್ನ
ಚೆಲುವ ನಲಿವೆ
ವಿವಿಧ ರೂಪ
ನಟನೆಗಳಲಿ
ದಿವದ ಸೊಗಸಿನೊಂದಿಗೆ
ಜಗದ ಸತ್ಯ ತುಂಬಿದೆ
ಪುನರಪಿ ಜನನಂ
ಪುನರಪಿ ಮರಣಂ
ಪುನರಪೀ ಜನನೀ
ಜಠರೇ ಶಯನಂ

✲✲ • • • • • • • • • • • • • • ✲✲

**(..10ನೇ ಪುಟದಿಂದ, *ಪುಂಡರೀಕ ವಿಠಲ*)**

ಎಂಬುದು ಕೋಶ ಗ್ರಂಥ. ವ್ಯಾಕರಣದ ಛಂದೋಗತಿ, ವೃತ್ತ, ಗಣ, ಅಲಂಕಾರಗಳನ್ನು ಬಳಸಿ ಎಲ್ಲಾ ಗ್ರಂಥಗಳನ್ನು ರಚಿಸಲಾಗಿದೆ.

ಈತನ ಗ್ರಂಥಗಳಿಂದ ಪ್ರಭಾವಿತರಾದ ಶ್ರೀಕಂಠ, ಭಾವಭಟ್ಟ, ತುಲಜೇಂದ್ರರು ಮುಂದೆ ತಮ್ಮದೇ ಆದ ಸಂಗೀತ ಲಾಕ್ಷಣಿಕ ಗ್ರಂಥಗಳನ್ನು ಬರೆದರು. ನರ್ತನನಿರ್ಣಯದ ಹಸ್ತಪ್ರತಿಗಳು ಕಲ್ಕತ್ತ, ಮೈಸೂರು, ಬರೋಡಾ, ತಂಜಾವೂರುಗಳಲ್ಲಿದ್ದು ಇವುಗಳ ಆಧಾರದಿಂದ ನರ್ತನನಿರ್ಣಯವನ್ನೂ ಸಂಪಾದಿಸಿ ಪ್ರಕಟಿಸಲಾಯಿತು., ಮುಂಬೈಯಲ್ಲಿ 20ನೇ ಶತಮಾನದ 1912–13–14ರ ಕಾಲದಲ್ಲೇ ಸದ್ರಾಗ ಚಂದ್ರೋದಯ, ರಾಗಮಂಜರೀ, ರಾಗಮಾಲಾಗಳನ್ನು ಸಂಪಾದಿಸಿ ಪ್ರಕಟಿಸಲಾಗಿತ್ತು. ಪುಂಡರೀಕನ ಗ್ರಂಥಗಳ ಮೂಲಪ್ರತಿ ಸಂಸ್ಕೃತದಲ್ಲಿದ್ದರೂ, ಈ ಅತ್ಯಮೂಲ್ಯ ಗ್ರಂಥಗಳನ್ನು ಸಂಪಾದಿಸಿ, ಕನ್ನಡದಲ್ಲಿ ವಿಮರ್ಶಾತ್ಮಕ ಪೀಠಿಕೆ, ಅನುವಾದ, ವ್ಯಾಖ್ಯಾನ, ಅನುಬಂಧ ಬರೆದವರು ಖ್ಯಾತ ನೃತ್ಯ ವಿದ್ವಾಂಸ ಡಾ। ರಾ. ಸತ್ಯನಾರಾಯಣ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ 1986ರಲ್ಲಿ ಈ ನಾಲ್ಕೂ ಗ್ರಂಥಗಳನ್ನು 'ಪುಂಡರೀಕಮಾಲಾ' ಎಂದು ಸಮಗ್ರ ಗ್ರಂಥದಲ್ಲಿ ಹಿಡಿದಿಟ್ಟಿದ್ದು, ಸಂಗೀತ ನೃತ್ಯ ಕ್ಷೇತ್ರದಲ್ಲಿ ಸರ್ವಕಾಲೀನ, ಉತ್ಕೃಷ್ಟ ಗ್ರಂಥವೆನಿಸಿಕೊಂಡಿದೆ.

**ಬೆ**ಡಗಿನ ಕೊಡಗಿನ ಮಡಿಕೇರಿಯಿಂದ ಬಿಡುಗಡೆಯಾಗುತ್ತಿರುವ ನೂಪುರ ಭ್ರಮರಿಯನ್ನು ಓದಿ ಮೆಚ್ಚುಗೆಯಾಯಿತು. ಈ ನಿಟ್ಟಿನಲ್ಲಿ ಗಟ್ಟಿ ಮನಸ್ಸಿನ ತಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ಜನಸಾಮಾನ್ಯರ ಬೆಂಬಲವೂ ಒಟ್ಟುಗೂಡಿ ನೂಪುರದ ಮಧುರ ಧ್ವನಿ ಮನೆಮನೆಗೆ ತಲುಪುವಂತಾಗಲಿ ಎಂದು ಹಾರೈಸುತ್ತೇನೆ.

**–ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, ಕಾಸರಗೋಡು.**

✻ ✻

**ಚಿ**ಕ್ಕದಾದರೂ ಚೊಕ್ಕವಾಗಿ ಸ್ಪಷ್ಟವಾಗಿದೆ ಈ ಶುದ್ಧ ಕಲಾತ್ಮಕ ಪತ್ರಿಕೆ. ಇಂಥದ್ದೇ ಪತ್ರಿಕೆ ಹಾಸಣಗಿ ಗಣಪತಿ ಭಟ್ಟರ ಹಿಂದೂಸ್ಥಾನೀ ಸಂಗೀತಕ್ಕೆ ಮೀಸಲಾದ 'ನಾದಗ್ರಾಮ' ಕೆಲವೇ ಸಂಚಿಕೆಗಳಲ್ಲಿ ಮಂಗಳ ಹಾಡಿತ್ತು. 'ಯಕ್ಷಗಾನ' ಪತ್ರಿಕೆ ಮೂರ್ನಾಲ್ಕು ಸಲ ಮೇಲೆದ್ದರೂ ದೀರ್ಘಕಾಲ ಉಳಿಯಲಿಲ್ಲ. ಅದರಂತೆ ಉಳಿದ ಅನೇಕ ಪತ್ರಿಕೆಗಳೂ ಕೂಡಾ. ಇವೆಲ್ಲವನ್ನೂ ನಿಮ್ಮನ್ನೂ ಅಧೀರರನ್ನಾಗಿ ಮಾಡಲು ಬರೆಯುತ್ತಿಲ್ಲ. ಈ ಮಾರ್ಗದಲ್ಲಿ ದಿಟ್ಟತನ ನಿಮ್ಮನ್ನು ಮುಂದುವರೆಸಲಿ. ಪತ್ರಿಕೆ ದೀರ್ಘಕಾಲ ಬಾಳಲಿ, ಬೆಳೆಯಲಿ.

**–ಮೋಹನ .ಗ. ಹೆಗಡೆ, ಸಾಗರ.**




✻ ✻

**ನೂ**ಪುರ ಭ್ರಮರಿ ನನ್ನ ನಿರೀಕ್ಷೆಗಿಂತಲೂ ಮೀರಿ ಅತ್ಯಂತ ಸುದೃಢವಾಗಿ ಬರುತ್ತಿದೆ. ಖಂಡಿತಕ್ಕೂ ಸಾಧನೆಯೇ ಸರಿ! ತುಂಬು ಹೃದಯದ ಅಭಿನಂದನೆಗಳು. ಖಂಡಿತಕ್ಕೂ ನೃತ್ಯ–ಸಂಗೀತದ ಕುರಿತಾದ ಈ ಪತ್ರಿಕೆಯು ಕಲಾಸಕ್ತರಿಗೆ, ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿ. ಪತ್ರಿಕೆಯ ಬೆಳವಣಿಗೆ ಇನ್ನೂ ಆಗಬೇಕಿದೆ. ಅದಾಗ್ಯೂ ನಿಮ್ಮ ಪ್ರಯತ್ನ ಅತ್ಯಂತ ಸ್ತುತ್ಯಾರ್ಹ. ನಿರಂತರವಾಗಿ ಈ ಕಾರ್ಯದಲ್ಲಿ ಯಶಸ್ಸು ನಿಮ್ಮೆಡೆಗೆ ಹರಿದುಬರುತ್ತಿರಲಿ. ಬೆಳೆಯಬೇಕು–ಬೆಳಗಬೇಕು–ನೂಪುರದ ಧ್ವನಿ ಎಲ್ಲೆಡೆ ಝುಲ್ಲೆನ್ನಬೇಕು.

**–ಗೀತಾ ಕೊಂಕೋಡಿ, ಬರಹಗಾರರು, ಮಂಗಳೂರು.**

✻ ✻

**ನೂ**ಪುರದ ಕಳೆದ ಸಂಚಿಕೆಯ ಮುಖಪುಟ ಸುಂದರವಾಗಿ ಮೂಡಿ ಮುದ ನೀಡಿತ್ತು. ಸಂಪಾದಕೀಯದ ಶೈಲಿ ಹಿಡಿಸಿತು. ಪತ್ರಿಕೆ ಚೆನ್ನಾಗಿ ಮೂಡಿ ಬರುತ್ತಿದೆ.

**–ರವಿಶಂಕರ ಶಾಸ್ತ್ರಿ, ಟಾಟಾ ಕನ್ಸಲ್ಟೆನ್ಸಿ ಸರ್ವೀಸ್, ಬೆಂಗಳೂರು.**

**ಜೊತೆಗೆ,...ಖ್ಯಾತ ಅಂಕಣಕಾರ ಶ್ರೀವತ್ಸ ಜೋಷಿ, ಶಿವಮೊಗ್ಗದ ನಾಟ್ಯ ಗುರು ಜನಾರ್ಧನ, ಮೈಸೂರಿನ ಕಲಾವಿದರಾದ ಬದರಿ ದಿವ್ಯಭೂಷಣ್ ಮತ್ತು ಅಂಜನಾ ಭೂಷಣ್, ಪುತ್ತೂರಿನ ಪಶುಪತಿ ಶರ್ಮ, ಬೆಂಗಳೂರಿನ ರವೀ ಆರೇನಹಳ್ಳಿ, ರಾಜೇಶ್ ಪದ್ಮಾರ್ ಶುಭ ಹಾರೈಸಿದ್ದಾರೆ.**

✻ ✻





## ಲಲಿತ ಲಹರಿ



**ಬ**ಂದು ಮತ್ತೆ ಕೊಂಜಿಕಾಡಿ
ನಿಂದು ಕಾಲ್ಗೆ ತೊಡರಿಪಾಡಿ
ಚೆಲ್ಲಮೆರ್ದು ನಲಿಯಿರ್ಪೆ
ನವಿಲನಾಟ್ಯ ನಲಿಯಿರ್ಪೆ

ನವಿಲ ನಾಟ್ಯ ನಲಿದು ಅವಿದ
ನವೆದ ಎದೆಯ ಸೊದೆಯನೆರೆದು
ನಲ್ಲಸುಖವ ನೀಡಿರ್ಪೆ
ಮೆಲ್ಲನೆಮ್ಮ ನಗಿಸಿರ್ಪೆ

**–ರಾ.ಸು.ಮಣಿ– 'ಪುಷ್ಪ ವಿಕ್ಷೇಪ'**

✻ ✻

**(Continued from 15th page...Poetry In Motion)**

belongs to India.

Even Indian classical music is very spiritual and divine. It has a basic structure within which the musicians play their own "feelings". "Music comes from very deep inside, Through music we want to bring across a message of love, peace and harmony.



*ನೃತ್ಯವನ್ನೇ ಉಸಿರಾಗಿಸಿದ ಉಡುಪಿಯ ಹಿರಿಯ ನೃತ್ಯ ಕಲಾವಿದ ರಾಧಾಕೃಷ್ಣ ನೃತ್ಯನಿಕೇತನದ ಗುರು ರಾಧಾಕೃಷ್ಣ ತಂತ್ರಿ ಅವರ ಆತ್ಮ ಭಗವಂತನಲ್ಲಿ ಲೀನವಾಗಿದೆ.*

*ನೂಪುರ ಭ್ರಮರಿಯಿಂದ ಭಾವಪೂರ್ಣ ಶ್ರದ್ಧಾಂಜಲಿ.*



***ಕಲೆಯು ಬಾಳ್ವೆಗೆ ಮಿಗಿಲ್ ಬಾಳ್ವೆಯ ಕಲೋಲ್ಲಾಸ***
***ಕಲೆ ಸಂಸ್ಕೃತಿ ವಿಲಾಸ ; ಬಾಳ್ ಸೃಷ್ಟಿಗೆ ವಿಕಾಸ***

**–ಕುವೆಂಪು**